**ಗೌರವಾನ್ವಿತ ಉಪ ಮುಖ್ಯಮಂತ್ರಿಗಳು, ಸಚಿವರು, ಸಂಸತ್ ಸದಸ್ಯರು, ಶಾಸಕರು ಹಾಗೂ ಬೆಂಗಳೂರಿನ ಪ್ರಜ್ಞಾವಂತ ನಾಗರಿಕರೇ,**

ಡಾ. ರಾಜೇಂದ್ರ ಕೆ.ವಿ, ಆಯುಕ್ತರು, ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆದ ನಾನು ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ 2025–26ರ ಪರಿಷ್ಕೃತ ಅಂದಾಜು ಮತ್ತು 2026–27ರ ಆಯವ್ಯಯ ಅಂದಾಜುಗಳನ್ನು ತಮ್ಮ ಮುಂದೆ ಮಂಡಿಸಲು ನನಗೆ ಸಂತೋಷವಾಗುತ್ತಿದೆ. ನಾಗರಿಕರಿಗೆ ಉತ್ತಮ ಮೂಲಭೂತ ಸೌಕರ್ಯಗಳೊಂದಿಗೆ ಅರ್ಥಪೂರ್ಣ ಜೀವನ ನಡೆಸಲು ಅವಕಾಶ ಕಲ್ಪಿಸುವುದು ನಮ್ಮ ನಗರ ಸ್ಥಳೀಯ ಸಂಸ್ಥೆಯ ಪ್ರಾಥಮಿಕ ಆದ್ಯತೆಯಾಗಿದೆ. ಈ ದಿಶೆಯಲ್ಲಿ ಬೆಂಗಳೂರು ಪಶ್ಚಿಮ ನಗರ ಪಾಲಿಕೆಯು ಹಲವಾರು ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಕರ್ನಾಟಕದ ಗೌರವಾನ್ವಿತ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಮತ್ತು ರಾಜ್ಯದ ಉಪ ಮುಖ್ಯಮಂತ್ರಿಗಳು ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರಾದ ಸನ್ಮಾನ್ಯ ಶ್ರೀ ಡಿ.ಕೆ.ಶಿವಕುಮಾರ್ ಅವರ ಸಮರ್ಥ ಮಾರ್ಗದರ್ಶನದಲ್ಲಿ, ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ತುಷಾರ್ ಗಿರಿನಾಥ್ ಹಾಗೂ ಪಾಲಿಕೆಯ ಆಡಳಿತಗಾರರಾದ ಶ್ರೀ ಮಹೇಶ್ವರ ರಾವ್ ರವರ ಸಲಹೆ ಸೂಚನೆಗಳೊಂದಿಗೆ, 2026–27ರ ಪಾಲಿಕೆಯ ಆಯವ್ಯಯವನ್ನು ಸಿದ್ದಪಡಿಸಲಾಗಿದೆ. ಆಯವ್ಯಯ ತಯಾರಿಕೆಯಲ್ಲಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿದ ಎಲ್ಲಾ ಗೌರವಾನ್ವಿತ ಸಚಿವರು, ಶಾಸಕರು, ಜನಪ್ರತಿನಿದಿಗಳು, ಅಧಿಕಾರಿಗಳು, ಸಿಬ್ಬಂದಿಗಳು, ಸರ್ಕಾರೇತರ ಸಂಸ್ಥೆಗಳು, ನಾಗರೀಕರು ಮತ್ತು ನಾಗರೀಕ ವೇದಿಕೆಗಳು, ಸಂಘ ಸಂಸ್ಥೆಗಳು ಹಾಗೂ ಮಾಧ್ಯಮ ಮಿತ್ರರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಕಾರ್ಯದಲ್ಲಿ ನನ್ನೊಂದಿಗೆ ಕರ್ತವ್ಯ ನಿರ್ವಹಿಸಿದ ಪಾಲಿಕೆಯ ಆಯವ್ಯಯ ತಂಡದ ಶ್ರಮವನ್ನು ವಿಶೇಷವಾಗಿ ಸ್ಮರಿಸುತ್ತಾ, ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯನ್ನು ಸ್ವಚ್ಛವಾಗಿಡಲು ಹಗಲಿರುಳು ಶ್ರಮಿಸುತ್ತಿರುವ ನಮ್ಮ

ಪೌರಕಾರ್ಮಿಕರ ನಿಸ್ವಾರ್ಥ ಸೇವೆಯನ್ನು ಈ ಸಂದರ್ಭದಲ್ಲಿ ಉಲ್ಲೇಖಿಸ ಬಯಸುತ್ತೇನೆ.

ಬೆಂಗಳೂರು ನಗರದ ಇತಿಹಾಸ ಮತ್ತು ವೈಭವವನ್ನು ಪ್ರತಿಬಿಂಬಿಸುವ ಪ್ರಮುಖ ಸ್ಮಾರಕಗಳಲ್ಲಿ ಕೆಂಪೇಗೌಡರ ಗೋಪುರಗಳು ವಿಶಿಷ್ಟ ಸ್ಥಾನವನ್ನು ಹೊಂದಿವೆ. ನಗರವನ್ನು ಸ್ಥಾಪಿಸಿದ ಮಹಾನಾಯಕ ನಾಡಪ್ರಭು ಕೆಂಪೇಗೌಡರು, ಬೆಂಗಳೂರು ನಗರದ ವ್ಯಾಪ್ತಿಯನ್ನು ಗುರುತಿಸಲು ನಿರ್ಮಿಸಿದ ಈ ಗೋಪುರಗಳು ಅವರ ದೂರದೃಷ್ಟಿ ಮತ್ತು ನಗರ ಯೋಜನೆಯ ಅದ್ಭುತ ಉದಾಹರಣೆಗಳಾಗಿವೆ. ವಿಶೇಷವಾಗಿ ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ವ್ಯಾಪ್ತಿಯೊಳಗೆ ಬರುವ ಕೆಂಪಾಂಬುದಿ ಗೋಪುರ ಮತ್ತು ಮೇಕ್ರಿ ವೃತ್ತ ಸಮೀಪದ ಕೆಂಪೇಗೌಡ ಉದ್ಯಾನವನ ಗೋಪುರ ನಮ್ಮ ಪಾಲಿಕೆಯ ಐತಿಹಾಸಿಕ ಹೆಮ್ಮೆಗೂ ಸಾಕ್ಷಿಯಾಗಿವೆ. ಕೆಂಪೇಗೌಡರ ಗೋಪುರಗಳು ನಮಗೆ ಇತಿಹಾಸದ ನೆನಪು ಮಾತ್ರವಲ್ಲ, ಇಂದಿನ ಮತ್ತು ಭವಿಷ್ಯದ ಅಭಿವೃದ್ಧಿಗೆ ಮಾರ್ಗದರ್ಶನ ನೀಡುವ ಶಾಶ್ವತ ಚಿಹ್ನೆಗಳಾಗಿವೆ. ಅವರ ಆದರ್ಶಗಳನ್ನು ಅಳವಡಿಸಿಕೊಂಡು, ನಾವು ಬೆಂಗಳೂರನ್ನು ಇನ್ನಷ್ಟು ವ್ಯವಸ್ಥಿತ, ಸುಂದರ ಮತ್ತು ಸುಸ್ಥಿರ ನಗರವನ್ನಾಗಿ ರೂಪಿಸೋಣ.

ವೇಗವಾಗಿ ವಿಸ್ತಾರಗೊಳ್ಳುತ್ತಿರುವ ಮಹಾನಗರವಾದ ಬೆಂಗಳೂರಿನ ಸಮಗ್ರ ಯೋಜನೆ, ವಿಕೇಂದ್ರೀಕೃತ ಆಡಳಿತ, ಸಮನ್ವಯಿತ ಅಭಿವೃದ್ಧಿ ಮತ್ತು ಪರಿಣಾಮಕಾರಿ ಆಡಳಿತದ ಅಗತ್ಯತೆಯನ್ನು ಮನಗಂಡು ಕರ್ನಾಟಕ ಸರ್ಕಾರವು ವೇಗವಾಗಿ ಬೆಳೆಯುತ್ತಿರುವ ಬೆಂಗಳೂರನ್ನು ಈ ಹಿಂದೆ ಬೆಂಗಳೂರು ನಗರ ಸಭೆ, ನಂತರ, ಬೆಂಗಳೂರು ನಗರ ಪಾಲಿಕೆ, ತದನಂತರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತಿಸಿ, ಇದೀಗ ರಾಜ್ಯದ ಉಪ ಮುಖ್ಯಮಂತ್ರಿಗಳು ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರಾದ ಸನ್ಮಾನ್ಯ “ಶ್ರೀ ಡಿ.ಕೆ.ಶಿವಕುಮಾರ್” ಅವರ ಮಹತ್ವಾಕಾಂಕ್ಷೆಯಂತೆ ಬೆಂಗಳೂರಿನ ಸರ್ವತೋಮುಖ ಅಭಿವೃದ್ಧಿಗಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಗ್ರೇಟರ್ ಬೆಂಗಳೂರು ಅಥಾರಿಟಿ) ವನ್ನು ರಚಿಸಲಾಗಿದೆ. ನಗರದ ನಾಗರೀಕರ ಬೇಕು–ಬೇಡಗಳಿಗೆ ಕ್ಷಿಪ್ರವಾಗಿ

ಸ್ಪಂದಿಸಲು ಈ ಪ್ರಾಧಿಕಾರದ ಅಡಿಯಲ್ಲಿ 2025 ರ ಸೆಪ್ಟೆಂಬರ್ 2 ರಂದು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಮತ್ತು ಕೇಂದ್ರ ಹೀಗೆ ಐದು ನಗರ ಪಾಲಿಕೆಗಳು ಅಸ್ತಿತ್ವಕ್ಕೆ ಬಂದಿದ್ದು, ಈ ಐದೂ ಪಾಲಿಕೆಗಳಲ್ಲಿ ಬೆಂಗಳೂರು ಪಶ್ಚಿಮ ನಗರ ಪಾಲಿಕೆಯು ತನ್ನದೇ ಆದ ರೀತಿಯಲ್ಲಿ ವಿಭಿನ್ನತೆ, ವಿಶಿಷ್ಠತೆ ಹಾಗೂ ವಿಶೇಷತೆಯನ್ನು ಹೊಂದಿದೆ.

2026–27ನೇ ಸಾಲಿನ ಆಯವ್ಯಯವು ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಚೊಚ್ಚಲ ಆಯವ್ಯಯ ಆಗಿದ್ದು, ಇದು ಹೊಸ ಆಡಳಿತ ಘಟಕದ ದಿಕ್ಕು ಮತ್ತು ದೃಷ್ಟಿಯನ್ನು ಪ್ರತಿಬಿಂಬಿಸುವ ಐತಿಹಾಸಿಕ ದಾಖಲೆಯಾಗಿರುತ್ತದೆ.

ಬೆಂಗಳೂರು ಪಶ್ಚಿಮ ನಗರ ಪಾಲಿಕೆಯು ಅಂದಾಜು 45 ಲಕ್ಷ ಜನ ಸಂಖ್ಯೆಯನ್ನು ಹೊಂದಿದ್ದು, ಸುಮಾರು 161.00 ಚ.ಕಿ.ಮೀ ವ್ಯಾಪ್ತಿಯನ್ನು ಹೊಂದಿರುವ ಬೆಂಗಳೂರು ನಗರದ ಪಶ್ಚಿಮ ಭಾಗವಾಗಿರುತ್ತದೆ. ಹಳೆಯ ಬೆಂಗಳೂರಿನ ವೈಭವವನ್ನು ಹೊತ್ತ, ಶಿಕ್ಷಣ ಹಾಗೂ ವಾಣಿಜ್ಯ ಪ್ರದೇಶವಾದ "ಮಲ್ಲೇಶ್ವರಂ", ಮೈಸೂರು ಆಡಳಿತದ ಕಾಲಘಟ್ಟದಲ್ಲಿ ರೂಪುಗೊಂಡ ಯೋಜಿತ ವಸತಿ ಪ್ರದೇಶಗಳಾದ "ಬಸವನಗುಡಿ" ಭಾಗಗಳು, ಕೈಗಾರಿಕಾ ಕ್ರಾಂತಿಯ ಕಾಲಘಟ್ಟದಲ್ಲಿ ಮಹತ್ವ ಪಡೆದ "ರಾಜಾಜಿನಗರ" ಮತ್ತು "ಯಶವಂತಪುರ" ಭಾಗಗಳು, ಸಣ್ಣ ಮತ್ತು ಮಧ್ಯಮ ಉದ್ಯಮಗಳ ತಾಣವಾದ "ಗೋವಿಂದರಾಜನಗರ", ತಾಂತ್ರಿಕ ಮತ್ತು ಕೈಗಾರಿಕಾ ವಲಯವಾಗಿರುವ "ದಾಸರಹಳ್ಳಿ", ಶಾಂತ ನಿವಾಸಿ ವಲಯವಾಗಿರುವ "ಪದ್ಮನಾಭನಗರ", ಮಹಾಲಕ್ಷ್ಮೀಲೇಔಟ್, ವೇಗವಾಗಿ ಬೆಳೆಯುತ್ತಿರುವ ನಿವಾಸಿ ಹಾಗೂ ವ್ಯಾಪಾರ ವಲಯವಾದ "ವಿಜಯನಗರ", ರಾಜಾಜಿನಗರ ದಂತಹ ಒಟ್ಟಾರೆ 10 ವಿಧಾನಸಭಾ ಕ್ಷೇತ್ರಗಳು, ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸೇರಿವೆ ಹಾಗೂ ಬೆಂಗಳೂರು ಪಶ್ಚಿಮ ನಗರ ಪಾಲಿಕೆಯು ಒಟ್ಟು 112 ವಾರ್ಡ್‌ಗಳನ್ನು ಹೊಂದಿದ್ದು, ಇದು ಬೆಂಗಳೂರಿನ

ಇತರೆ ನಾಲ್ಕು ನಗರ ಪಾಲಿಕೆಗಳಿಗಿಂತಲು ಹೆಚ್ಚಿನ ವಾರ್ಡ್‌ಗಳನ್ನು ಹೊಂದಿರುವ ಪ್ರಮುಖ ಘಟಕವಾಗಿದೆ.

ಸರ್ಕಾರದ ಕಾರ್ಯಕ್ರಮಗಳು ಹಾಗೂ ಸರ್ಕಾರದ ಯೋಜನೆಗಳು ಯಶಸ್ಸು ಕಾಣಬೇಕಾದರೆ ಸಾಮುದಾಯಿಕ ಸಹಭಾಗಿತ್ವ ಅತೀ ಮುಖ್ಯ ಎಂಬ ಸತ್ವಭರಿತ ತತ್ವವನ್ನು ಬೆಂಗಳೂರು ಪಶ್ಚಿಮ ಮಹಾನಗರ ಪಾಲಿಕೆಯು ತನ್ನ ಧ್ಯೇಯವನ್ನಾಗಿ ಮಾತ್ರವಲ್ಲ, ಪ್ರಾಮಾಣಿಕವಾಗಿ ಪಾಲಿಸಲು ಬಯಸುತ್ತದೆ. ಪಾಲಿಕೆಯ ವ್ಯಾಪ್ತಿಯಲ್ಲಿ ಅನುಷ್ಠಾನಗೊಳ್ಳುವ ಪ್ರಮುಖ ಕಾರ್ಯಕ್ರಮಗಳಲ್ಲಿ ನಗರದ ನಾಗರೀಕರ ಪಾಲುದಾರಿಕೆ ಇದ್ದಲ್ಲಿ ಮಾತ್ರ ನಿರೀಕ್ಷಿತ ಪ್ರಗತಿ ಸಾಧ್ಯ ಎಂಬುದು ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ನಂಬಿಕೆ ಮತ್ತು ವಿಶ್ವಾಸವಾಗಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಸಹಭಾಗಿತ್ವದ ಹಲವಾರು ಯೋಜನೆಗಳನ್ನು ಈ ಆಯವ್ಯಯದಲ್ಲಿ ಜಾರಿಗೆ ತರಲು ಉದ್ದೇಶಿಸಲಾಗಿದ್ದು, ಮುಂದಿನ ಮೂರು ದಶಕಗಳ ದೀರ್ಘಕಾಲೀನ ಗುರಿಗಳನ್ನು ಗಮನದಲ್ಲಿಟ್ಟು, ಮೂಲಸೌಕರ್ಯ, ಸಾರ್ವಜನಿಕ ಸೇವೆಗಳು, ಪರಿಸರ ಸಂರಕ್ಷಣೆ, ತಂತ್ರಜ್ಞಾನ ಆಧಾರಿತ ನಗರೀಕರಣ ಮತ್ತು ಸಾಮಾಜಿಕ ಕಲ್ಯಾಣದಂತಹ ಪ್ರಮುಖ ಕ್ಷೇತ್ರಗಳ ದೃಷ್ಟಿಯಲ್ಲಿಟ್ಟುಕೊಂಡು ಈ ಸಾಲಿನ ಆಯವ್ಯಯವನ್ನು ಪ್ರಸ್ತುತ ಪಡಿಸುತ್ತಿದ್ದೇನೆ.

## ಕಂದಾಯ

1. ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ 2026–27 ನೇ ಸಾಲಿನ ಆಯವ್ಯದಲ್ಲಿ ಒಟ್ಟಾರೆ ರೂ.1964.60 ಕೋಟಿಗಳ ಆದಾಯ ನಿರೀಕ್ಷಿಸಲಾಗಿದ್ದು. ಪ್ರಮಾಣಿತ ಕಾರ್ಯಾಚರಣಾ ಕಾರ್ಯ ವಿಧಾನಗಳ ಅಳವಡಿಕೆಯೊಂದಿಗೆ, ಅಧಿಕಾರಿ/ಸಿಬ್ಬಂದಿಗಳ ಸಾಮರ್ಥ್ಯ ವೃದ್ಧಿ ಮತ್ತು ಬಹುಸುತ್ತಿನ ತರಬೇತಿಗಳಿಂದ ಹಾಗೂ ತೆರಿಗೆ ಜಾಲದಿಂದ ಹೊರಗಿರುವ ಆಸ್ತಿಗಳನ್ನು ಗುರುತಿಸಿ ತೆರಿಗೆ ವ್ಯಾಪ್ತಿಗೆ ತರುವುದರ ಮೂಲಕ ಈ ಗುರಿಯನ್ನು ಸಾಧಿಸಲಾಗುವುದು.

2. ಬೆಂಗಳೂರು ನಗರದಲ್ಲಿನ ನಾಗರಿಕರ ಆಸ್ತಿ ಹಕ್ಕುಗಳನ್ನು ದೃಢಪಡಿಸುವ ಉದ್ದೇಶದಿಂದ ಬಿ ಖಾತಾವನ್ನು ಎ ಖಾತಾಗೆ ಪರಿವರ್ತಿಸುವ ಸರ್ಕಾರದ ನಿರ್ಧಾರವು ಆರ್ಥಿಕ ಮತ್ತು ಅಭಿವೃದ್ಧಿ ದೃಷ್ಟಿಯಿಂದ ಮಹತ್ವಪೂರ್ಣವಾಗಿದೆ. ಈ ಯೋಜನೆಯಿಂದ ಪ್ರಾಥಮಿಕವಾಗಿ ಆಸ್ತಿ ಮೌಲ್ಯ ಹೆಚ್ಚಾಗುವ ಕಾರಣ ನಾಗರಿಕರಿಗೆ ಬ್ಯಾಂಕುಗಳಿಂದ ಹೆಚ್ಚಿನ ಸಾಲ ಸೌಲಭ್ಯ ದೊರೆಯುತ್ತದೆ, ಹೂಡಿಕೆ ಸಾಧ್ಯತೆಗಳು ವೃದ್ಧಿಯಾಗುತ್ತವೆ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ಸಿಗುತ್ತದೆ. ಹೀಗಾಗಿ, ಬಿ ಖಾತಾವನ್ನು ಎ ಖಾತಾಗೆ ಪರಿವರ್ತನೆಯು ನಾಗರಿಕರಿಗೆ ಸಹಾಯವಾಗುದರ ಜೊತೆಗೆ, ಪ್ರಸ್ತುತ ಸಾಲಿನಲ್ಲಿ ಪಾಲಿಕೆಗೆ ಸರಿ ಸುಮಾರು ಅಂದಾಜು ರೂ.563.00 ಕೋಟಿಗಳ ಆದಾಯವನ್ನು ನಿರೀಕ್ಷಿಸಲಾಗಿದ್ದು, ನಗರಾಭಿವೃದ್ಧಿಯ ಸಮಗ್ರ ಪ್ರಗತಿಗೆ ಸಹಾಯಕಾರಿಯಾಗಲಿದೆ.
3. ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಾರ್ವಜನಿಕರ ಭೂ ಆಸ್ತಿಗಳಿಗೆ ಎಲೆಕ್ಟ್ರಾನಿಕ್ ದಾಖಲೆಗಳ ವಿತರಣೆಯನ್ನು ಸುಲಭಗೊಳಿಸುವ ನಿಟ್ಟಿನಲ್ಲಿ ನೂತನವಾಗಿ ಖಾತಾಗಳನ್ನು ದಾಖಲಿಸಿಕೊಳ್ಳಲು ಹೊಸದಾಗಿ ಅವಕಾಶ ಕಲ್ಪಿಸಿದ್ದು, ಸಾರ್ವಜನಿಕರು ದಾಖಲೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಿ ಹೊಸ ಖಾತಾ ಅನ್ನು ಪಡೆಯಬಹುದಾಗಿರುತ್ತದೆ. ಇದರಿಂದ ಅಂದಾಜು ರೂ.18.00 ಕೋಟಿಗಳ ಆದಾಯ ನಿರೀಕ್ಷಿಸಲಾಗಿದೆ.
4. ಪಾಲಿಕೆಯ ಬಹುತೇಕ ಕ್ಷೇತ್ರಗಳು ಬೆಂಗಳೂರು ನಗರದ ಹಳೆಯ ವ್ಯಾಪ್ತಿಯಲ್ಲಿಯೇ ಇದ್ದರೂ, ತನ್ನ ಸ್ವಂತ ಆಸ್ತಿಗಳನ್ನು ಸಮರ್ಪಕವಾಗಿ ಉಪಯೋಗಿಸಿ ಆದಾಯವನ್ನು ಹೆಚ್ಚಿಸುವ ದಿಸೆಯಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿದೆ. ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸಮುದಾಯ ಭವನಗಳ ಅನುಮತಿ, ಪಾಲಿಕೆ ಕಟ್ಟಡಗಳ ಬಾಡಿಗೆಗೆ ಅನುಮತಿ, ಭೂ ಬಾಡಿಗೆಗೆ ಅನುಮತಿ, ಕ್ರೀಡಾಂಗಣಗಳು ಹಾಗೂ ಚಲನಚಿತ್ರ ಚಿತ್ರೀಕರಣ

ಸ್ಥಳಗಳ ಬುಕ್ಕಿಂಗ್ ವ್ಯವಸ್ಥೆ ಹಾಗು ಇತರೆ ಮಂಜೂರಾತಿ ಪ್ರಕ್ರಿಯೆಯನ್ನು ಸಂಪರ್ಕ ರಹಿತ ಸೇವೆಗಳಾಗಿ ಒದಗಿಸುವ ನಿಟ್ಟಿನಲ್ಲಿ ಡಿಜಿಟಲ್ ಐಟಿ ಅಪ್ಲಿಕೇಷನ್ ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ಉಪಕ್ರಮದಿಂದ ಪಾರದರ್ಶಕತೆ ಮತ್ತು ಸುಗಮತೆ ಹೆಚ್ಚುವುದರ ಜೊತೆಗೆ, ಸಾರ್ವಜನಿಕರಿಗೆ ಸುಲಭ ಸೇವೆ ದೊರೆಯಲಿದೆ ಹಾಗೂ ಪಾಲಿಕೆಯ ಆಸ್ತಿಗಳ ಸಮರ್ಥ ಬಳಕೆಯಿಂದ ಹೆಚ್ಚುವರಿ ಆದಾಯ ಸಂಗ್ರಹವಾಗುವುದರ ಮೂಲಕ ನಗರಾಭಿವೃದ್ಧಿ ಕಾರ್ಯಗಳಿಗೆ ಬಲ ಸಿಗಲಿದೆ. ಹೀಗಾಗಿ, ಈ ಕ್ರಮವು ಸಾರ್ವಜನಿಕ ಸೇವಾ ಸುಧಾರಣೆಗೂ ಹಾಗೂ ಪಾಲಿಕೆಯ ಆರ್ಥಿಕ ಸದೃಢತೆಗೆ ದ್ವಿಮುಖ ಲಾಭವನ್ನು ಒದಗಿಸುತ್ತದೆ.

5. ಪಾಲಿಕೆಯ ಕಂದಾಯ ಪರಿವೀಕ್ಷಕರ ಕಾರ್ಯಕ್ಷಮತೆಯನ್ನು ವೃದ್ಧಿಸಲು ಹಾಗೂ ಇ–ಆಫೀಸ್ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ 122 ಗಣಕಯಂತ್ರಗಳನ್ನು ಹಾಗೂ 83 ಮುದ್ರಕಗಳನ್ನು ಟೆಂಡರ್ ಮುಖಾಂತರ ಖರೀದಿಸಲು ಯೋಜಿಸಲಾಗಿದೆ. ಇದರ ಮೂಲಕ ಕಾರ್ಯನಿರ್ವಹಣೆಯ ವೇಗ ಮತ್ತು ದಕ್ಷತೆ ಹೆಚ್ಚಳವಾಗುವ ಜೊತೆಗೆ, ದಾಖಲೆಗಳ ನಿರ್ವಹಣೆ ಮತ್ತು ಆನ್‌ಲೈನ್ ಸೇವೆಗಳ ಅನುಷ್ಠಾನ ಸುಗಮವಾಗಲಿದೆ. ಈ ಯೋಜನೆಗಾಗಿ ಅಗತ್ಯವಿರುವ ಅನುದಾನವನ್ನು ನಗರ ಪಾಲಿಕೆಯ ಬಜೆಟ್‌ನಲ್ಲಿ ಮೀಸಲಿರಿಸಲಾಗಿದೆ.

## ಆಸ್ತಿಗಳು

6. ಪಾಲಿಕೆಯು ವ್ಯಾಪ್ತಿಯಲ್ಲಿ, ಕಟ್ಟಡಗಳು, ಶಾಲೆಗಳು, ಆಸ್ಪತ್ರೆಗಳು, ಆಟದ ಮೈದಾನಗಳು, ಉದ್ಯಾನವನಗಳು, ಕೆರೆಗಳು, ದೋಬಿಘಾಟ್ ಹಾಗೂ ಪಾಲಿಕೆಯ ಇತರೆ ಆಸ್ತಿಗಳನ್ನು ಒಳಗೊಂಡಂತೆ ಒಟ್ಟಾರೆ 1946 ಆಸ್ತಿಗಳು ಇದ್ದು, ಇವುಗಳನ್ನು

ಸಾರ್ವಜನಿಕ ಉದ್ದೇಶಕ್ಕಾಗಿ ಪಾಲಿಕೆಯು ನಿರ್ವಹಿಸಿ ನಿರ್ವಹಣೆ ಮಾಡುತ್ತಿರುತ್ತದೆ.

7. ಪಾಲಿಕೆಯ ಆಸ್ತಿಗಳ ಸಮಗ್ರ ಸಮೀಕ್ಷೆ ನಡೆಸಲಾಗುವುದು. ಎಲ್ಲಾ ಆಸ್ತಿಗಳನ್ನು ಡಿಜಿಟಲ್ ರೂಪದಲ್ಲಿ ದಾಖಲಿಸಿ, GIS ಸೌಲಭ್ಯದಿಂದ ನಕ್ಷೆ ಹಾಗೂ ನಿಖರ ಐ.ಡಿ ಮೂಲಕ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ರೂಪಿಸಲಾಗುವುದು. ಸಾರ್ವಜನಿಕರು ವೆಬ್ ಪೋರ್ಟಲ್ ಅಥವಾ ಮೊಬೈಲ್ ಅಪ್ಲಿಕೇಷನ್ ಮೂಲಕ ಈ ಆಸ್ತಿಗಳ ಮಾಹಿತಿಯನ್ನು ಪರಿಶೀಲಿಸಲು ಸಾಧ್ಯವಾಗುವುದು ಹಾಗೂ ಕಾರಣಾಂತರಗಳಿಂದ ಪಾಲಿಕೆಯ ವಶದಲ್ಲಿ ಇಲ್ಲದೇ ಇರುವ ಪಾಲಿಕೆಯ ಆಸ್ತಿಗಳನ್ನು ಕಾನೂನಾತ್ಮಕವಾಗಿ ಮರುವಶಪಡಿಸಿಕೊಳ್ಳಲು ಕ್ರಮವಹಿಸಲಾಗುವುದು.
8. ನಗರ ಪಾಲಿಕೆಯ ಆಸ್ತಿಗಳನ್ನು ಸಂರಕ್ಷಿಸುವ ಹಿತದೃಷ್ಟಿಯಿಂದ, ಅನಧಿಕೃತ ಒತ್ತುವರಿಯನ್ನು ತಡೆಗಟ್ಟಲು, ಬಿ.ಡಿ.ಎ ಯಿಂದ ಪಾಲಿಕೆಗೆ ಹಸ್ತಾಂತರವಾಗಿರುವ ಆಸ್ತಿಗಳನ್ನು ಒಳಗೊಂಡಂತೆ, ಖಾಲಿ ಜಾಗಗಳಿಗೆ ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸುವ ಯೋಜನೆಗೆ ರೂ.5.00 ಕೋಟಿಗಳ ಅನುದಾನವನ್ನು ಮೀಸಲಿರಿಸಲಾಗಿದೆ.

## ಜಾಹೀರಾತು

9. ಗ್ರೇಟರ್ ಬೆಂಗಳೂರು ಪ್ರದೇಶ (ಜಾಹೀರಾತು) ನಿಯಮಗಳು 2025 ಜಾರಿಗೆ ಬಂದಿದ್ದು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಹೊಸದಾಗಿ ವಾಣಿಜ್ಯ ಜಾಹೀರಾತು ಅಳವಡಿಸಲು ಖಾಸಗಿ ಸಂಸ್ಥೆಗಳಿಗೆ ಟೆಂಡರ್ ಮೂಲಕ ಅನುಮತಿ ನೀಡಲು ಕ್ರಮವಹಿಸಲಾಗುತ್ತಿದೆ. ಇದರಿಂದ ಪಾಲಿಕೆಗೆ ಸುಮಾರು ರೂ.116.00 ಕೋಟಿಗಳ ಆದಾಯ ಬರುವ ನಿರೀಕ್ಷೆ ಇದ್ದು ಇದರಿಂದ ನಗರದ ಅಭಿವೃದ್ದಿಗೆ ಸಾಕಷ್ಟು ಅನುಕೂಲವಾಗಲಿದೆ.

10. ಸಾರ್ವಜನಿಕರಿಗೆ ಅವಶ್ಯಕತೆ ಇರುವ 50 ಸ್ಥಳಗಳಲ್ಲಿ ಸ್ಕೈವಾಕ್‌ಗಳನ್ನು ನಿರ್ಮಿಸಲು ಯೋಜನೆ ರೂಪಿಸಲಾಗುತ್ತಿದ್ದು, ಇವುಗಳಲ್ಲಿ ವಾಣಿಜ್ಯ ಜಾಹೀರಾತುಗಳಿಗೆ ಅವಕಾಶ ಮಾಡಿಕೊಟ್ಟು ಪಾಲಿಕೆಗೆ ಹೆಚ್ಚುವರಿ ರೂ.2.00 ಕೋಟಿಗಳ ಆದಾಯವನ್ನು ನಿರೀಕ್ಷೆ ಮಾಡಲಾಗಿದೆ.

## ಭೂಸ್ವಾಧೀನ ಮತ್ತು ಟಿ.ಡಿ.ಆರ್

11. ಬೆಂಗಳೂರು ಪಶ್ಚಿಮ ನಗರ ಪಾಲಿಕೆಯಲ್ಲಿ ಮೂಲ ಸೌಕರ್ಯ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕಾಗಿ ಭೂಸ್ವಾಧೀನ ಅವಶ್ಯಕವಾಗಿದ್ದು, ಪಾಲಿಕೆಯಲ್ಲಿ ನೂತನವಾಗಿ ಮಾನ್ಯ ಆಯುಕ್ತರ ಅಧೀನದಲ್ಲಿ ಟಿ.ಡಿ.ಆರ್ ಕೋಶವನ್ನು ಸ್ಥಾಪಿಸಲಾಗಿದೆ ಹಾಗೂ ದಿನಾಂಕ: 07/02/2026 ರಂದು ಟಿ.ಡಿ.ಆರ್ ಕೆಲಸ ಕಾರ್ಯಗಳ ನಿರ್ವಹಣೆ ಬಗ್ಗೆ ಹೊರಡಿಸಿರುವ ಸುತ್ತೋಲೆಯಂತೆ ಭೂಸ್ವಾಧೀನ ಪಡಿಸಿಕೊಂಡ ಮಾಲೀಕರ ಸ್ವತ್ತುಗಳಿಗೆ ಟಿ.ಡಿ.ಆರ್/ಡಿ.ಆರ್.ಸಿ ನೀಡಲು ನಿರ್ಧರಿಸಲಾಗಿದೆ.
12. ಸಾರ್ವಜನಿಕರಿಗೆ ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರ (Transfer of Development Rights) ಹಕ್ಕುಗಳನ್ನು ವಿತರಿಸಿ ಪಾಲಿಕೆಗೆ ಭೂ ಖರೀದಿಸಲು ಅನುವಾಗುವಂತೆ ಕ್ರಮವಹಿಸಲಾಗುವುದು ಹಾಗೂ TDR ವಿನಿಮಯಕ್ಕಾಗಿ TDR Exchange ಸೆಲ್ ಅನ್ನು ಸ್ಥಾಪಿಸಲಾಗುವುದು.
13. ಕ್ಲುಪ್ತ ಸಮಯದಲ್ಲಿ ಭೂಮಿಯ ಲಭ್ಯತೆ ಇಲ್ಲದಿದ್ದಲ್ಲಿ ಯಾವುದೇ ಯೋಜನೆಯನ್ನು ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲ. ಈ ಸಮಸ್ಯೆಯನ್ನು ಮನಗೊಂಡು ಪಾಲಿಕೆಯು ಈ ಆರ್ಥಿಕ ವರ್ಷದಲ್ಲಿ ರಸ್ತೆ ಅಗಲೀಕರಣ, ವೃತ್ತಗಳ ಅಭಿವೃದ್ಧಿ, ವಾಣಿಜ್ಯ

ಆಸ್ತಿಗಳ ಸೃಜನೆ ಹಾಗೂ ಮಲ್ಟಿ ಲೆವೆಲ್ ಕಾರ್ ಪಾರ್ಕಿಂಗ್ ವ್ಯವಸ್ಥೆಗಳನ್ನು ಕಲ್ಪಿಸಲು, ಭೂಸ್ವಾಧೀನಕ್ಕಾಗಿ ರೂ.20.00 ಕೋಟಿಗಳ ಅನುದಾನ ಮೀಸಲಿರಿಸಿದೆ.

14. ಭೂ–ಸ್ವಾದೀನಕ್ಕಾಗಿ ಭೂಮಿಯನ್ನು ಗುರುತಿಸುವಿಕೆ, ಭೂ–ಸ್ವಾದೀನದ ಉದ್ದೇಶ ಫಾರಂ–1 ಮತ್ತು 3 ರಲ್ಲಿನ ಅಧಿಸೂಚನೆ, ತಾತ್ಕಾಲಿಕ ಅಂಗೀಕಾರದ ಆದೇಶಗಳನ್ನು ಮಾಹಿತಿ ತಂತ್ರಜ್ಞಾನ ಆಧಾರಿತವಾಗಿ ಡಿಜಿಟಲೀಕರಣಗೊಳಿಸಲಾಗುವುದು. ಇದರಿಂದಾಗಿ ಪಾಲಿಕೆ ವತಿಯಿಂದ ಟಿ.ಡಿ.ಆರ್/ಡಿ.ಆರ್.ಸಿ ಗಳನ್ನು ಪಾರದರ್ಶಕವಾಗಿ ವಿತರಿಸಲು ಅನುಕೂಲವಾಗುವುದು.

15. ಈ ವ್ಯವಸ್ಥೆಯಲ್ಲಿ ಟಿ.ಡಿ.ಆರ್/ಡಿ.ಆರ್.ಸಿ ಗಳ ಕುರಿತು ಸಂಪೂರ್ಣ ಮಾಹಿತಿಯು ಸಾರ್ವಜನಿಕ ವಲಯದಲ್ಲಿ ಆನ್‌ಲೈನ್ ವಿನಿಮಯಕ್ಕೆ ಒಳಪಟ್ಟಿರುತ್ತದೆ ಮತ್ತು ಇದು ಟಿ.ಡಿ.ಆರ್/ ಡಿ.ಆರ್.ಸಿಗಳ ಆನ್‌ಲೈನ್ ಮಾರಾಟ ಮತ್ತು ಖರೀದಿಗೆ ಅವಕಾಶ ಕಲ್ಪಿಸುತ್ತದೆ. ಈ ವ್ಯವಸ್ಥೆಯು ಟಿ.ಡಿ.ಆರ್/ಡಿ.ಆರ್.ಸಿ ಮಾರುಕಟ್ಟೆಯಲ್ಲಿ ವಿಶ್ವಾಸ ಹಾಗೂ ಪಾರದರ್ಶಕತೆಯನ್ನು ತರುವ ಮೂಲಕ, ಟಿ.ಡಿ.ಆರ್/ಡಿ.ಆರ್.ಸಿ ಆನ್‌ಲೈನ್ ಮಾರುಕಟ್ಟೆಯಲ್ಲಿ ಸಾರ್ವಜನಿಕರು ಮುಕ್ತವಾಗಿ ಭಾಗವಹಿಸಲು ಅನುವು ಮಾಡಿಕೊಡುತ್ತದೆ.

## ನಗರ–ಯೋಜನೆ

16. ಬೆಂಗಳೂರು ಪಶ್ಚಿಮ ನಗರ ಪಾಲಿಕೆಯು ವಿಸ್ತೀರ್ಣ ಮತ್ತು ಜನಸಂಖ್ಯೆಯಲ್ಲಿ ಬೃಹತ್ ಪಾಲಿಕೆಯಾಗಿದ್ದು ಭಾರತದ ಇತರೆ ರಾಜ್ಯಗಳು, ಕರ್ನಾಟಕದ ಇತರೆ ನಗರಗಳಿಂದ ಬೆಂಗಳೂರನ್ನು ಸಂಪರ್ಕಿಸುವ ಶೇ.75 ರಷ್ಟು ವಾಹನಗಳು, ಪಶ್ಚಿಮ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ High Density Corridor ಗಳಾದ ರಾಷ್ಟ್ರೀಯ ಹೆದ್ದಾರಿಗಳಾದ ತುಮಕೂರು ರಸ್ತೆ, ಮೈಸೂರು

ರಸ್ತೆ ಹಾಗೂ ರಾಜ್ಯ ಹೆದ್ದಾರಿಗಳಾದ ಮಾಗಡಿ ರಸ್ತೆಗಳ ಮುಖಾಂತರ ಬೆಂಗಳೂರು ನಗರವನ್ನು ಬಂದು ಸೇರುತ್ತವೆ.

17. ಪಶ್ಚಿಮ ನಗರ ಪಾಲಿಕೆಯ ಕೆಲವು ವಿಧಾನಸಭಾ ಕ್ಷೇತ್ರಗಳು ಹಳೆಯ ಬೆಂಗಳೂರು ವ್ಯಾಪ್ತಿಗೆ ಒಳಪಟ್ಟಿದ್ದು ಸಮಗ್ರ ಅಭಿವೃದ್ಧಿಯನ್ನು ಹೊಂದಿ ನಗರದ ಪ್ರಗತಿಗೆ ಮಹತ್ವದ ಕೊಡುಗೆ ನೀಡುತ್ತಿವೆ, ರಾಜರಾಜೇಶ್ವರಿ ನಗರ ಮತ್ತು ಯಶವಂತಪುರ ವಿಧಾನಸಭಾ ಕ್ಷೇತ್ರಗಳು ನಗರದ ಅಂಚಿನಲ್ಲಿ ನೆಲೆಸಿದ್ದು ಭಾಗಶಃ ಅಭಿವೃದ್ಧಿಯನ್ನು ಹೊಂದಿದ್ದು, ಹೆಚ್ಚಿನ ಅಭಿವೃದ್ಧಿಗೆ ಅವಕಾಶವನ್ನು ಹೊಂದಿರುತ್ತವೆ.
18. ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ನಗರ ಯೋಜನೆ ವಿಭಾಗ ಮತ್ತು ಇತರ 4 ನಗರ ಪಾಲಿಕೆಗಳ ನಗರ ಯೋಜನೆ ವಿಭಾಗಗಳನ್ನು ಒಳಗೊಂಡಂತೆ ಪರಿಷ್ಕೃತ ಮಹಾ ಯೋಜನೆಯನ್ನು ತಯಾರಿಸುವ ಪ್ರಸ್ತಾವನೆಯು ಚಾಲ್ತಿಯಲ್ಲಿದ್ದು, ಮಹಾ ಯೋಜನೆಯು ಅನುಮೋದನೆಗೊಂಡ ನಂತರ ಪಶ್ಚಿಮ ನಗರ ಪಾಲಿಕೆಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಅಳವಡಿಸಿಕೊಳ್ಳಲಾಗುವುದು.
19. ಮಹಾ ಯೋಜನೆಯಲ್ಲಿನ ರಸ್ತೆ ನಿರ್ಮಾಣ ಹಾಗೂ ರಸ್ತೆ ಅಗಲೀಕರಣ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸುವುದು ನಗರ ಪಾಲಿಕೆಗಳ ಕರ್ತವ್ಯವಾಗಿದ್ದು, ಇದರ ಭಾಗವಾಗಿ ಈ ಕೆಳಕಂಡ ರಸ್ತೆಗಳನ್ನು ಅಗಲೀಕರಣಗೊಳಿಸಲು ಪ್ರಸ್ತಾಪಿಸಲಾಗಿರುತ್ತದೆ.
    - ಇಟ್ಟಮಡು ರಸ್ತೆ (10 ಮೀ. ನಿಂದ 18 ಮೀ. ಗಳವರೆಗೆ 5 ಕಿ.ಮೀ. ಉದ್ದದ ರಸ್ತೆ ಅಗಲೀಕರಣ)
    - ಕುರುಬರಹಳ್ಳಿ ಮುಖ್ಯರಸ್ತೆ (12 ಮೀ. ನಿಂದ 24 ಮೀ. ಗಳವರೆಗೆ 1.4 ಕಿ.ಮೀ. ಉದ್ದದ ರಸ್ತೆ ಅಗಲೀಕರಣ)
    - ಮಹಾಲಕ್ಷ್ಮೀಪುರ ಪ್ರವೇಶ ರಸ್ತೆ (15 ಮೀ. ನಿಂದ 24 ಮೀ. ಗಳವರೆಗೆ 3 ಕಿ.ಮೀ. ಉದ್ದದ ರಸ್ತೆ ಅಗಲೀಕರಣ)

- ಹನುಮಂತ ನಗರ ಮುಖ್ಯರಸ್ತೆ (12 ಮೀ. ನಿಂದ 18 ಮೀ. ಗಳವರೆಗೆ 4.5 ಕಿ.ಮೀ. ಉದ್ದದ ರಸ್ತೆ ಅಗಲೀಕರಣ)
- ಹೇರೊಹಳ್ಳಿ ಪ್ರವೇಶ ರಸ್ತೆ (9.50 ಮೀ. ನಿಂದ 15 ಮೀ. ಗಳವರೆಗೆ 0.90 ಕಿ.ಮೀ. ಉದ್ದದ ರಸ್ತೆ ಅಗಲೀಕರಣ)
- ತ್ಯಾಗರಾಜನಗರ ಮುಖ್ಯ ರಸ್ತೆ (12ಮೀ. ನಿಂದ 24 ಮೀ. ಗಳವರೆಗೆ 1.27 ಕಿ.ಮೀ. ಉದ್ದದ ರಸ್ತೆ ಅಗಲೀಕರಣ)
- ಹೊಸಕೆರೆಹಳ್ಳಿ ಮುಖ್ಯ ರಸ್ತೆಯಿಂದ ಹೊರ ವರ್ತುಲ ರಸ್ತೆ (12 ಮೀ. ನಿಂದ 24 ಮೀ. ಗಳವರೆಗೆ 1.9 ಕಿ.ಮೀ. ಉದ್ದದ ರಸ್ತೆ ಅಗಲೀಕರಣ)
- ಕತ್ರಿಗುಪ್ಪೆ ಮುಖ್ಯ ರಸ್ತೆಯಿಂದ 50 ಅಡಿ ರಸ್ತೆ ವಿದ್ಯಾಪೀಠ ವೃತ್ತದವರೆಗೆ (12 ಮೀ. ನಿಂದ 24 ಮೀ. ಗಳವರೆಗೆ 0.780 ಕಿ.ಮೀ. ಉದ್ದದ ರಸ್ತೆ ಅಗಲೀಕರಣ)

20. ನಗರ ಯೋಜನೆ ವಿಭಾಗದಿಂದ ಕಟ್ಟಡ ನಕ್ಷೆ ಮಂಜೂರಾತಿ, ಪರಿಷ್ಕೃತ ನಕ್ಷೆ ಮಂಜೂರಾತಿ, ಪ್ಲಿಂತ್ ಸರ್ಟಿಫಿಕೇಟ್, ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ನಿಗದಿತ ಶುಲ್ಕವನ್ನು ಪಾವತಿಸಿಕೊಂಡು ಅನುಮೋದನೆಯನ್ನು ನೀಡಲಾಗುತ್ತಿದ್ದು, ಸದರಿ ಅನುಮೋದನೆಗಳ ಜೊತೆ ಏಕ ನಿವೇಶನ ನಕ್ಷೆ ಮಂಜೂರಾತಿ ಅನುಮೋದನೆಗೆ ಸಂಬಂದಿಸಿದಂತೆ ಹೊಸದಾಗಿ ಪಾಲಿಕೆಯಿಂದ

    ಆನ್ಲೈನ್ EODB Console ಮುಖಾಂತರ ಕೈಗೊಳ್ಳಲಾಗುತ್ತಿದ್ದು ಸಾರ್ವಜನಿಕರು ಕಂದಾಯ ಭೂಮಿ ಅಥವಾ ಬಿ–ಖಾತಾ ಸ್ವತ್ತುಗಳಿಗೆ ನಿಗದಿತ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಶುಲ್ಕವನ್ನು ಪಾವತಿಸಿಕೊಂಡು ವಾಣಿಜ್ಯ/ವಸತಿ ಮತ್ತು ಇತರೆ ಉದ್ದೇಶಗಳಿಗೆ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳುವ ಸಂಬಂಧ ಮಹತ್ವಾಕಾಂಕ್ಷೆ ಯೋಜನೆಯಾಗಿರುತ್ತದೆ ಹಾಗೂ ಸದರಿ ಮೇಲಿನ ಎಲ್ಲಾ ಅನುಮೋದನೆಗಳಿಂದ ಆರ್ಥಿಕ ವರ್ಷ 2026–27ನೇ ಸಾಲಿನಲ್ಲಿ ಸಂಗ್ರಹವಾಗುವ ಅಂದಾಜು ರೂ.254.20

ಕೋಟಿಗಳ ಶುಲ್ಕಗಳನ್ನು ನಗರ ಪಾಲಿಕೆಯಿಂದ ಕೈಗೊಳ್ಳಲಾಗುವ ವಿವಿಧ ಸಮಗ್ರ ಅಭಿವೃದ್ಧಿಕಾರ್ಯಗಳಿಗೆ ಬಳಸಲಾಗುತ್ತದೆ.

21. ಇದಲ್ಲದೇ ಸರ್ಕಾರದ ಹೊಸ ನೀತಿ (Premium FAR) ಯಿಂದ ಆರ್ಥಿಕ ವರ್ಷ 2026–27ನೇ ಸಾಲಿನಲ್ಲಿ ಅಂದಾಜು ರೂ.380.00 ಕೋಟಿಗಳ ಆದಾಯವನ್ನು ನಿರೀಕ್ಷಿಸಲಾಗಿದ್ದು, ಇದನ್ನೂ ಸಹ ಬೆಂಗಳೂರು ನಗರದ ಸರ್ವತೋಮುಖ ಅಭಿವೃದ್ಧಿಯ ಯೋಜನೆಯಲ್ಲಿ ಬಳಸಲು ಪ್ರಸ್ತಾಪಿಸಲಾಗಿದೆ.

22. ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ Single Plot Approval ಗೆ ಅವಕಾಶ ಕಲ್ಪಿಸಲಾಗಿದ್ದು, ಇದರಿಂದ ಅಂದಾಜು ರೂ.200.00 ಕೋಟಿಗಳ ಆದಾಯ ನಿರೀಕ್ಷಿಸಲಾಗಿದೆ.

23. ನಗರಾಭಿವೃದ್ಧಿ ಕಾರ್ಯಗಳನ್ನು ಸಮಗ್ರವಾಗಿ ರೂಪಿಸಲು, ನಗರ ವಿನ್ಯಾಸ ಘಟಕ (Urban Design Cell) ಸ್ಥಾಪನೆಗಾಗಿ ಹಾಗೂ ಮಾಸ್ಟರ್ ಪ್ಲಾನ್ ಸಿದ್ಧತೆಗೆ ಒಟ್ಟಾರೆ ರೂ. 5.50 ಕೋಟಿಗಳನ್ನು ಹಂಚಿಕೆ ಮಾಡಲಾಗಿದೆ. ಈ ಮೊತ್ತವನ್ನು ಜಿ.ಬಿ.ಎ (GBA) ಮೂಲಕ ಅನುಷ್ಠಾನಗೊಳಿಸಲು ತನ್ನ ಕೊಡುಗೆಯನ್ನು ನೀಡುತ್ತಿದೆ. ಇದರ ಮೂಲಕ ನಗರ ಯೋಜನೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಭವಿಷ್ಯದ ಸಮಗ್ರ ನಗರ ವಿನ್ಯಾಸಕ್ಕೆ ಬಲ ನೀಡಲಾಗುವುದು.

### ಆಡಳಿತ

24. ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಡಳಿತ ವಿಭಾಗವು ಬೆಂಗಳೂರು ಪಶ್ಚಿಮ ನಗರದ ಸರ್ವತೋಮುಖ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದೆ. ಪಶ್ಚಿಮ ನಗರ ಪಾಲಿಕೆಯ ಪ್ರಸ್ತುತ ಕಾರ್ಯನಿರತ ಸಿಬ್ಬಂದಿಗಳ ಸಂಖ್ಯೆಯು ನಗರದ ವೇಗವಾಗಿ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿರುವುದಿಲ್ಲ, ಸಾರ್ವಜನಿಕರಿಗೆ ಸೇವೆಗಳನ್ನು ಸಮಯಕ್ಕೆ ಸರಿಯಾಗಿ ಮತ್ತು ಪರಿಣಾಮಕಾರಿಯಾಗಿ ಒದಗಿಸಲು ಸಿ & ಆರ್ (Cadre &

Recruitment) ಪ್ರಕ್ರಿಯೆಯನ್ನು ಶೀಘ್ರ ಅಂತಿಮಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ವಿವಿಧ ಇಲಾಖೆಗಳಲ್ಲಿನ ಹುದ್ದೆಗಳ ಅವಶ್ಯಕತೆಗಳನ್ನು ಪರಿಶೀಲಿಸಿ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು. ಅರ್ಹ ಮತ್ತು ನಿಪುಣ ಸಿಬ್ಬಂದಿಯನ್ನು ನೇಮಿಸುವ ಮೂಲಕ ಸಾರ್ವಜನಿಕ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುವುದು ಮುಖ್ಯ ಉದ್ದೇಶವಾಗಿದೆ. ವೇಗವಾದ ನೇಮಕಾತಿ, ತರಬೇತಿ ಹಾಗೂ ಕಾರ್ಯಕ್ಷಮತೆಯ ಮೇಲ್ವಿಚಾರಣೆ ಮೂಲಕ ಜನರಿಗೆ ಅಗತ್ಯ ಸೇವೆಗಳು ಸಮಯಕ್ಕೆ ತಲುಪುವಂತೆ ಕ್ರಮ ಕೈಗೊಳ್ಳಲಾಗುತ್ತದೆ. ಈ ಬಜೆಟ್ ಕ್ರಮವು ಆಡಳಿತ ವ್ಯವಸ್ಥೆಯನ್ನು ಬಲಪಡಿಸಿ, ಸಾರ್ವಜನಿಕ ವಿಶ್ವಾಸವನ್ನು ಹೆಚ್ಚಿಸಲು ಸಹಕಾರಿಯಾಗುತ್ತದೆ.

25. ಪಶ್ಚಿಮ ನಗರ ಪಾಲಿಕೆಯ ಸಿಬ್ಬಂದಿಯ ಆಡಳಿತ ಕೌಶಲ್ಯ, ಸಾಮರ್ಥ್ಯ ನಿರ್ಮಾಣ ಮತ್ತು ವ್ಯಕ್ತಿತ್ವ ಅಭಿವೃದ್ಧಿಯನ್ನು ಹೆಚ್ಚಿಸಲು ಪ್ರತಿಷ್ಠಿತ ತರಬೇತಿ ಸಂಸ್ಥೆಗಳಿಂದ ಸಿಬ್ಬಂದಿಗಳಿಗೆ ಸಕಾಲಿಕ ತರಬೇತಿಯನ್ನು ಆಯೋಜಿಸಲಾಗುತ್ತಿದೆ.

26. ಸರ್ಕಾರವು ರೂಪಿಸಿದ ಸಾಮಾನ್ಯ ವರ್ಗಾವಣೆ ಮಾರ್ಗಸೂಚಿ ಆದೇಶಗಳ ಪ್ರಕಾರ, 2026–27ನೇ ವರ್ಷದಲ್ಲಿ ಪಶ್ಚಿಮ ನಗರ ಪಾಲಿಕೆಯಲ್ಲಿ ವರ್ಗಾವಣೆಯನ್ನು ಕೈಗೊಳ್ಳಲಾಗುತ್ತದೆ. ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ವರ್ಗಾವಣೆಗಳಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲಾಗುತ್ತದೆ.

27. ನಾಗರಿಕರಿಗೆ ಸೇವೆಗಳನ್ನು ಸಕಾಲಿಕ ಮತ್ತು ಪರಿಣಾಮಕಾರಿಯಾಗಿ ತಲುಪಿಸಲು ಸಿಬ್ಬಂದಿಯ ಸಮಯೋಚಿತ ಹಾಜರಾತಿ ಮತ್ತು ಕರ್ತವ್ಯದಲ್ಲಿ ತೊಡಗಿಸಿಕೊಳ್ಳುವಿಕೆ ಬಹಳ ಮುಖ್ಯ. ಸಿಬ್ಬಂದಿಗಳ ಹಾಜರಾತಿ ನಿರ್ವಹಣೆಗಾಗಿ ಅಪ್ಲಿಕೇಷನ್ ಮೂಲಕ ಹಾಜರಾತಿಯನ್ನು ದಾಖಲಿಸಿಕೊಳ್ಳಲು ಕ್ರಮವಹಿಸಲಾಗುವುದು.

28. ಬ್ರ್ಯಾಂಡ್ ಬೆಂಗಳೂರು–ಟೆಕ್ ಬೆಂಗಳೂರು ಅಡಿ ಜಿ.ಬಿ.ಎ (GBA) ನಲ್ಲಿ ಮಾಹಿತಿ ತಂತ್ರಜ್ಞಾನ ಕೋಶ ಹಾಗೂ ಇಂಟಿಗ್ರೇಟೆಡ್ ಕಮಾಂಡ್ ಮತ್ತು ಕಂಟ್ರೋಲ್ ಕೇಂದ್ರವನ್ನು ಸ್ಥಾಪಿಸಿ, ಡಿಜಿಟಲ್

ಸೇವೆಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಆಡಳಿತ ವ್ಯವಸ್ಥೆಯ ಕಾರ್ಯಕ್ಷಮತೆಯನ್ನು ಮತ್ತಷ್ಟು ಬಲಪಡಿಸುವ ಸಲುವಾಗಿ ಈ ಸಾಲಿನ ಆಯವ್ಯದಲ್ಲಿ ರೂ.6.00 ಕೋಟಿಗಳ ಅನುದಾನವನ್ನು ಮೀಸಲಿರಿಸಿದೆ.

## ನೈರ್ಮಲ್ಯ

29. ಪಾಲಿಕೆಯಲ್ಲಿ ಒಟ್ಟಾರೆ 4754 ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು, ನಗರವನ್ನು ಸ್ವಚ್ಛ, ಸುಂದರ ಮತ್ತು ಆರೋಗ್ಯಕರವಾಗಿಡುವಲ್ಲಿ ಪೌರಕಾರ್ಮಿಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಪ್ರತಿದಿನವೂ ಅವರು ತ್ಯಾಗಭಾವದಿಂದ ಮತ್ತು ಶ್ರಮಪಟ್ಟು ರಸ್ತೆ, ಕಾಲುವೆ, ಸಾರ್ವಜನಿಕ ಸ್ಥಳಗಳು ಮತ್ತು ನಿವಾಸ ಪ್ರದೇಶಗಳನ್ನು ಸ್ವಚ್ಛಗೊಳಿಸುವ ಮೂಲಕ ನಾಗರಿಕರ ಜೀವನಮಟ್ಟವನ್ನು ಹೆಚ್ಚಿಸುತ್ತಿದ್ದಾರೆ. ನಗರದ ಸ್ವಚ್ಛತೆಗೆ ಅವರು ನೀಡುತ್ತಿರುವ ಅಮೂಲ್ಯ ಕೊಡುಗೆಗೆ ಪಾಲಿಕೆಯು ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತಿದ್ದು, ಅವರ ಶ್ರಮ ಮತ್ತು ಸಮರ್ಪಣೆಯನ್ನು ಸದಾ ಗೌರವಿಸುತ್ತದೆ.
30. ಪಾಲಿಕೆಯ ಪ್ರತಿ ವಿಧಾನಸಭಾ ವ್ಯಾಪ್ತಿಯ ಆರ್ಟಿರಿಯಲ್ ಮತ್ತು ಸಬ್ ಆರ್ಟಿರಿಯಲ್ ರಸ್ತೆಗಳನ್ನು ಸ್ವಚ್ಚಗೊಳಿಸಲು Sweeping Machine ಗಳನ್ನು ಖರೀದಿಗಾಗಿ ಹಾಗೂ ಬಾಡಿಗೆಯ ಆಧಾರದ ಮೇಲೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ ಒಂದರಂತೆ Sweeping Machine ಗಳನ್ನು ಪಡೆಯಲು ಈಗಾಗಲೇ ಟೆಂಡರ್ ಕರೆಯಲಾಗಿರುತ್ತದೆ. ಈ ವಿಧಾನದಿಂದ ತ್ವರಿತಗತಿಯಲ್ಲಿ ರಸ್ತೆಯನ್ನು ಸ್ವಚ್ಚಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವುದರಿಂದ ದ್ವಿಚಕ್ರ ವಾಹನ ಸವಾರರಿಗೆ ಹಾಗೂ ಪಾದಾಚಾರಿಗಳಿಗೆ ದೂಳು ರಹಿತ ಸಂಚಾರಕ್ಕೆ ಅನುಕೂಲವಾಗುತ್ತದೆ. ಸದರಿ ಉದ್ದೇಶಕ್ಕಾಗಿ ರೂ.25.00 ಕೋಟಿಗಳ ಅನುದಾನವನ್ನು ಮೀಸಲಿರಿಸಿದೆ.

31. ತ್ಯಾಜ್ಯ ಸಂಗ್ರಹಣೆ, ವಿಂಗಡಣೆ, ಮರುಬಳಕೆ ಹಾಗೂ ವೈಜ್ಞಾನಿಕ ವಿಲೇವಾರಿ ಕ್ರಮಗಳನ್ನು ಸುಧಾರಿಸಲು ಆಧುನಿಕ ಉಪಕರಣಗಳು, ವಾಹನಗಳು ಮತ್ತು ತಂತ್ರಜ್ಞಾನವನ್ನು ಪರಿಚಯಿಸುವ ಸಲುವಾಗಿ BSWML ಸಂಸ್ಥೆಗೆ ಈ ಸಾಲಿನ ಆಯವ್ಯಯದಲ್ಲಿ ಒಟ್ಟಾರೆ ರೂ.300.00 ಕೋಟಿಗಳ ಅನುದಾನವನ್ನು ಮೀಸಲಿರಿಸಿದೆ.
32. ನಗರ ವ್ಯಾಪ್ತಿಯಲ್ಲಿ ಮನೆಮನೆಗಳಿಂದ ಸಂಗ್ರಹಿಸಲ್ಪಡುವ ಘನ ತ್ಯಾಜ್ಯವನ್ನು ಪರಿಣಾಮಕಾರಿಯಾಗಿ ಮತ್ತು ವೈಜ್ಞಾನಿಕವಾಗಿ ಸಂಗ್ರಹಿಸಿ ಸಾಗಿಸಲು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ 10 ಟ್ರಾನ್ಸ್‌ಫರ್ ಸ್ಟೇಷನ್ಸ್‌ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, BSWML ನ ಸಮನ್ವಯದೊಂದಿಗೆ ಈ ಯೋಜನೆಯನ್ನು ರೂಪಿಸಲಾಗುವುದು.

## ಕಲ್ಯಾಣ

33. ಪಾಲಿಕೆಯ ನಗರ ವ್ಯಾಪ್ತಿಯಲ್ಲಿ ವಾಸಿಸುವ ಪರಿಶಿಷ್ಟಜಾತಿ/ ಪರಿಶಿಷ್ಟಪಂಗಡ, ಪೌರಕಾರ್ಮಿಕರು, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ಆರ್ಥಿಕವಾಗಿ ಹಿಂದುಳಿದ ವರ್ಗ, ಮಹಿಳೆಯರು ಹಾಗೂ ವಿಶೇಷ ಚೇತನ ವರ್ಗದವರಿಗೆ ಶೈಕ್ಷಣಿಕ, ಆರ್ಥಿಕ, ಆರೋಗ್ಯ ಕಾರ್ಯಕ್ರಮಗಳೊಂದಿಗೆ ಇತರೆ ಸಹಾಯಧನವನ್ನು ನೀಡುವ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದ್ದು, ಕಲ್ಯಾಣ ಕಾರ್ಯಕ್ರಮಗಳಿಗಾಗಿ ಹಾಗೂ ಮೂಲಭೂತ ಸೌಕರ್ಯದಡಿ ಅಭಿವೃದ್ಧಿ ಕಾಮಗಾರಿಗಳಿಗಾಗಿ 2026-27ನೇ ಸಾಲಿನ ಆಯವ್ಯಯದಲ್ಲಿ ಒಟ್ಟು ರೂ.334.99 ಕೋಟಿಗಳ ಅನುದಾನವನ್ನು ಮೀಸಲಿರಿಸಲಾಗಿರುತ್ತದೆ.
34. ಪಾಲಿಕೆ ವ್ಯಾಪ್ತಿಯ ಪರಿಶಿಷ್ಟಜಾತಿ/ಪರಿಶಿಷ್ಟಪಂಗಡ, ಪೌರ ಕಾರ್ಮಿಕರು, ಹಿಂದುಳಿದವರ್ಗ, ಅಲ್ಪಸಂಖ್ಯಾತರು, ಆರ್ಥಿಕವಾಗಿ ಹಿಂದುಳಿದ ವರ್ಗ, ಮಹಿಳೆಯರು ಹಾಗೂ ವಿಶೇಷ ಚೇತನ

ವರ್ಗದವರಿಗೆ ಒಂಟಿ ಮನೆ ಯೋಜನೆಯಡಿ ಪ್ರತಿ ಅರ್ಹ ಫಲಾನುಭವಿಗೆ ತಲಾ ರೂ.5.00 ಲಕ್ಷಗಳ ಸಹಾಯಧನದಂತೆ ಹಾಗೂ ಅಮೃತ ಮಹೋತ್ಸವ ಯೋಜನೆ ಅಡಿಯಲ್ಲಿ ನಿವೇಶನ ರಹಿತರಿಗೆ ಸರ್ಕಾರದ ವತಿಯಿಂದ ನಿರ್ಮಾಣ ಮಾಡಿರುವ ವಸತಿ ಸಮುಚ್ಚಯದಲ್ಲಿನ ಘಟಕ ಖರೀದಿಸಲು ತಲಾ ರೂ.5.00 ಲಕ್ಷಗಳ ಸಹಾಯಧನದಂತೆ ಒಟ್ಟು ರೂ.71.64 ಕೋಟಿಗಳ ಅನುದಾನವನ್ನು ಮೀಸಲಿರಿಸಲಾಗಿರುತ್ತದೆ.

35. ಪಾಲಿಕೆಯ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪೌರಕಾರ್ಮಿಕರ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗ ಹಾಗೂ ವಿಶೇಷ ಚೇತನ ವರ್ಗದವರು ವಾಸಿಸುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯದಡಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ಒಟ್ಟು ರೂ.150.97 ಕೋಟಿಗಳ ಅನುದಾನವನ್ನು ಮೀಸಲಿರಿಸಲಾಗಿರುತ್ತದೆ.

36. ವಿಶೇಷ ಚೇತನರಿಗೆ ಹೆಚ್ಚುವರಿ ಚಕ್ರ ಅಳವಡಿಸಿರುವ ದ್ವಿ ಚಕ್ರ ವಾಹನ ಹಾಗೂ ಎಲೆಕ್ಟ್ರಿಕಲ್ ವೀಲ್ ಚೇರ್ ವಿತರಣೆ, ಎಲ್ಲಾ ವರ್ಗದವರಿಗೆ ಸಾರಥಿ ಯೋಜನೆಯಡಿ ಆಟೋ ಮತ್ತು ಕಾರು ವಿತರಣೆ ಹಾಗೂ ಸಾಮಾನ್ಯ ವರ್ಗದವರಿಗೆ, ತೃತೀಯ ಲಿಂಗದ ವರ್ಗದ ಅರ್ಹ ಫಲಾನುಭವಿಗಳಿಗೆ ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ತಲುಪಿಸುವ ಮೂಲಕ ಇವರುಗಳ ಹಾಗೂ ಇವರ ಕುಟುಂಬಗಳ ಜೀವನ ಮಟ್ಟವನ್ನು ಸುಧಾರಣೆ ಮಾಡಲು ಉದ್ದೇಶಿಸಿದ್ದು ಪ್ರಸಕ್ತ ಸಾಲಿನಲ್ಲಿ ಸದರಿ ಉದ್ದೇಶಕ್ಕಾಗಿ ರೂ.23.34 ಕೋಟಿಗಳ ಅನುದಾನವನ್ನು ಮೀಸಲಿರಿಸಲಾಗಿರುತ್ತದೆ.

37. ಪರಿಶಿಷ್ಟಜಾತಿ/ಪರಿಶಿಷ್ಟಪಂಗಡ, ಪೌರಕಾರ್ಮಿಕರು, ಹಿಂದುಳಿದವರ್ಗ. ಅಲ್ಪಸಂಖ್ಯಾತರು, ಆರ್ಥಿಕವಾಗಿ ಹಿಂದುಳಿದ ವರ್ಗ, ಹಿರಿಯ ನಾಗರಿಕರಿಗೆ, ವಿಶೇಷಚೇತನರಿಗೆ ಹಾಗೂ ಮಹಿಳೆಯರಿಗೆ ನೀಡುವ ಕಲ್ಯಾಣ ಕಾರ್ಯಕ್ರಮಗಳಾದ, ಆರೋಗ್ಯ ಕಾರ್ಯಕ್ರಮ, 1ನೇ ತರಗತಿಯಿಂದ ಉನ್ನತ ವ್ಯಾಸಂಗದವರೆವಿಗೆ

ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಶುಲ್ಕ ಮರುಪಾವತಿ, ಪದವಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅನುಕೂಲಕರವಾಗುವಂತೆ ಲ್ಯಾಪ್‌ಟಾಪ್ ಒದಗಿಸುವುದು, ಮಹಿಳೆಯರಿಗೆ ಸ್ವಯಂ ಉದ್ಯೋಗವನ್ನು ರೂಪಿಸಿಕೊಳ್ಳಲು ವಿವಿಧ ಕೌಶಲ್ಯ ತರಬೇತಿ (ವಾಹನ ಚಾಲನೆ, ಬ್ಯೂಟೀಷಿಯನ್, ಪ್ಯಾಷನ್ ಡಿಸೈನಿಂಗ್) ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ/ಪೌರಕಾರ್ಮಿಕರಿಗೆ ಉಚಿತ ಎಲೆಕ್ಟ್ರಿಕ್ ದ್ವಿ ಚಕ್ರ ವಾಹನ ಹಾಗೂ ಪಾಲಿಕೆಯಿಂದ ಉಚಿತ ಟೈಲರಿಂಗ್/ಎಂಬ್ರಾಯಿಡರಿ ತರಬೇತಿ ಪಡೆದ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ಹಾಗೂ ಪ್ರಮಾಣ ಪತ್ರ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಬುದ್ಧಿಮಾಂದ್ಯ ಮಕ್ಕಳಿಗೆ ಸಹಾಯಧನ, ಸಣ್ಣ ಉದ್ದಿಮೆದಾರರಿಗೆ ಸಹಾಯಧನ, ಆರೋಗ್ಯ ವಿಮೆ, ಕ್ರೀಡೆ, ಕೃತಕ ಅಂಗ ಜೋಡಣೆಗೆ ವೈದ್ಯಕೀಯ ವೆಚ್ಚ ಹಾಗೂ ವಿದೇಶದಲ್ಲಿ ವ್ಯಾಸಾಂಗ ಮಾಡುವವರಿಗೆ ಸಹಾಯಧನ ನೀಡುವ ಕಾರ್ಯಕ್ರಮಗಳಿಗಾಗಿ ಒಟ್ಟು ರೂ.47.17 ಕೋಟಿಗಳ ಅನುದಾನವನ್ನು ಮೀಸಲಿರಿಸಲಾಗಿರುತ್ತದೆ.

38. ಬೀದಿ ಬದಿ ವ್ಯಾಪಾರಿಗಳ ಜೀವನ ಸುಧಾರಣೆಗೆ ಉತ್ತಮ ಗುಣಮಟ್ಟದ ಇ–ವೆಂಡಿಂಗ್ ವಾಹನಗಳನ್ನು ನೀಡಲು ಸಹಾಯಧನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸಾರ್ವಜನಿಕರಿಗೆ ಹಾಗೂ ಬೆಂಗಳೂರು ನಗರದ ಟ್ರಾಫಿಕ್ ಜಾಮ್ ಅನ್ನು ತಡೆಗಟ್ಟುವ ನಿಟ್ಟಿನಲ್ಲಿ ಸುಸಜ್ಜಿತ ವೆಂಡಿಂಗ್ ಜೋನ್‌ಗಳನ್ನು ಗುರುತಿಸಿ ಅಭಿವೃದ್ಧಿಪಡಿಸಲಾಗುವುದು. ಸದರಿ ಉದ್ದೇಶಕ್ಕಾಗಿ ರೂ.13.35 ಕೋಟಿಗಳ ಅನುದಾನವನ್ನು ಮೀಸಲಿರಿಸಲಾಗಿರುತ್ತದೆ.
39. ಕೆಂಪೇಗೌಡ ಅಧ್ಯಯನ ಕೇಂದ್ರ ಮತ್ತು ಇನ್ನಿತರೆ ಅನುದಾನಿತ ಸಂಸ್ಥೆಗಳನ್ನು ಒಳಗೊಂಡಂತೆ ಆರ್ಥಿಕ ನೆರವು ನೀಡುವ ಸಲುವಾಗಿ ಒಟ್ಟು ರೂ.10.50 ಕೋಟಿಗಳ ಅನುದಾನವನ್ನು ಮೀಸಲಿರಿಸಲಾಗಿದೆ.

## ಸಾರ್ವಜನಿಕ ಸಂಪರ್ಕ

40. ಸಾರ್ವಜನಿಕ ಸಂಪರ್ಕ ವಿಭಾಗವು ಸಾರ್ವಜನಿಕರಿಗೆ ಪಾಲಿಕೆಯ ಯೋಜನೆಗಳು, ಕಾರ್ಯಕ್ರಮಗಳು ಮತ್ತು ಸೇವೆಗಳ ಕುರಿತು ಸ್ಪಷ್ಟ ಮತ್ತು ಸಮಯೋಚಿತ ಮಾಹಿತಿ ತಲುಪಿಸುವುದಕ್ಕಾಗಿ ಡಿಜಿಟಲ್ ಮಾಧ್ಯಮ, ಸಾಮಾಜಿಕ ಜಾಲತಾಣಗಳು ಮತ್ತು ಮಾಹಿತಿ ತಂತ್ರಜ್ಞಾನ ಬಳಸಿ ಮಾಹಿತಿ ಹರಿವು ಸುಧಾರಿಸುವ ಕ್ರಮಗಳನ್ನು ಕೈಗೊಳ್ಳಲಾಗುವುದು. ಈ ಮೂಲಕ ಪಾರದರ್ಶಕತೆ ಹೆಚ್ಚಿಸಿ, ನಾಗರಿಕರ ನಂಬಿಕೆಯನ್ನು ಗಳಿಸುವುದೇ ಪಾಲಿಕೆಯ ಗುರಿಯಾಗಿದೆ.
41. ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಎಲ್ಲಾ ಇಲಾಖೆಗಳಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿಯನ್ನು ನೀಡಲು ಫೇಸ್‌ಬುಕ್, X–ಸಾಮಾಜಿಕ ಮಾಧ್ಯಮ ಖಾತೆಗಳನ್ನು ನಿರ್ವಹಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಪಾಲಿಕೆಯ ಸಾಮಾಜಿಕ ಮಾಧ್ಯಮ ಜಾಲವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅಭಿವೃದ್ಧಿಪಡಿಸುವುದರ ಜೊತೆಗೆ ಪಾಲಿಕೆ ನಡೆಸುತ್ತಿರುವ ಅಭಿವೃದ್ಧಿ ಕಾರ್ಯಗಳ ಕುರಿತು ಸಾರ್ವಜನಿಕ ಸಂಪರ್ಕ ಇಲಾಖೆಯು ಪ್ರತ್ಯೇಕ ಇ–ನಿಯತಕಾಲಿಕೆ" ಯನ್ನು ಪ್ರಾರಂಭಿಸಲಾಗುವುದು.
42. ಪ್ರತಿ ಮಾಹೆಯಾನ ಪಾಲಿಕೆಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು, ಯೋಜನೆಗಳು, ಸಾಧನೆಗಳು ಹಾಗೂ ಸಾರ್ವಜನಿಕ ಸೇವೆಗಳ ಕುರಿತು ಡಿಜಿಟಲ್ ನ್ಯೂಸ್ ಬುಲೆಟಿನ್‌ಗಳನ್ನು ಪ್ರಕಟಿಸಿ ಸಾರ್ವಜನಿಕರಿಗೆ ಮಾಹಿತಿಯನ್ನು ಒದಗಿಸಲಾಗುವುದು.

## ಹಣಕಾಸು ಮತ್ತು ಲೆಕ್ಕಪತ್ರ ವಿಭಾಗ

43. ಪಾಲಿಕೆಯ ಸಮಗ್ರ ಅಭಿವೃದ್ಧಿ ಮತ್ತು ಆರ್ಥಿಕ ಸ್ಥಿರತೆಯನ್ನು ಸಾಧಿಸುವುದು ಹಣಕಾಸು ವಿಭಾಗದ ಧ್ಯೇಯವಾಗಿದ್ದು ಅದರಂತೆ ಪಾಲಿಕೆಯ ಹಣಕಾಸು ವಿಭಾಗವು, ಆದಾಯ ಸಂಪನ್ಮೂಲಗಳನ್ನು ವೃದ್ಧಿಸುವುದು, ವೆಚ್ಚವನ್ನು ಸಮರ್ಥವಾಗಿ ನಿಯಂತ್ರಿಸುವುದು ಹಾಗೂ ಮೂಲಸೌಕರ್ಯ, ಕಲ್ಯಾಣ ಮತ್ತು ಸಾರ್ವಜನಿಕ ಸೇವೆಗಳ ಅಭಿವೃದ್ಧಿಗೆ ಅಗತ್ಯವಾದ ನಿಧಿಗಳನ್ನು ಆದ್ಯತೆಯ ಆಧಾರದ ಮೇಲೆ ಸಮರ್ಪಕವಾಗಿ ಹಂಚಿಕೆ ಮಾಡುವ ಉದ್ದೇಶದೊಂದಿಗೆ ವಿವಿಧ ಕಲ್ಯಾಣ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು, ನೇರ ನಗದು ವರ್ಗಾವಣೆ (Direct Benefit Transfer) ವ್ಯವಸ್ಥೆಯನ್ನು ಸ್ಥಾಪಿಸಿ, ಫಲಾನುಭವಿಗಳಿಗೆ ಪಾರದರ್ಶಕ ಮತ್ತು ಸಮಯೋಚಿತವಾಗಿ ನೆರವು ತಲುಪುವಂತೆ ಕ್ರಮ ಕೈಗೊಳ್ಳಲಾಗುವುದು.
44. “ಪಾಲಿಕೆಯ ಆಡಳಿತಾತ್ಮಕ ಕಾರ್ಯಗಳಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಹಾಗೂ ಹಣಕಾಸು ಶಿಸ್ತು ಬಲಪಡಿಸುವ ಉದ್ದೇಶದಿಂದ ಆಡಿಟ್ ಸೆಲ್ (Audit Cell) ಸ್ಥಾಪನೆಗೆ ಬಜೆಟ್‌ನಲ್ಲಿ ಅಗತ್ಯ ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಈ ಘಟಕದ ಮೂಲಕ ಆಂತರಿಕ ಪರಿಶೀಲನೆ, ಲೆಕ್ಕಪತ್ರಗಳ ಸಮಗ್ರ ಪರಿಶೀಲನೆ ಹಾಗೂ ಯೋಜನೆಗಳ ಹಣಕಾಸು ನಿರ್ವಹಣೆಯ ಮೇಲ್ವಿಚಾರಣೆ ಪರಿಣಾಮಕಾರಿಯಾಗಿ ನಡೆಯಲಿದೆ. ನಗರ ಪಾಲಿಕೆಯ ಅಭಿವೃದ್ಧಿ ಯೋಜನೆಗಳು ಹಾಗೂ ಸಾರ್ವಜನಿಕ ಸೇವೆಗಳ ಅನುಷ್ಠಾನದಲ್ಲಿ ಉತ್ತಮ ಆಡಳಿತವನ್ನು ಖಚಿತಪಡಿಸಲು ಆಡಿಟ್ ಸೆಲ್ ಪ್ರಮುಖ ಪಾತ್ರವಹಿಸಲಿದೆ.
45. ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಪಾವತಿಗಳನ್ನು ಐ.ಎಫ್.ಎಂ.ಎಸ್ ತಂತ್ರಾಂಶ ಹಾಗೂ ಬ್ಯಾಂಕ್‌ನೊಂದಿಗೆ

ಹೋಸ್ಟ್-ಟು-ಹೋಸ್ಟ್ ಸಂಯೋಜನೆ ಮಾಡಿ ಆನ್‌ಲೈನ್ ಮುಖಾಂತರ ಪಾವತಿಸಲಾಗುತ್ತಿದ್ದು, ಇದರಿಂದ ನೈಜ-ಸಮಯ (Real Time) ಆಧಾರದ ಮೇಲೆ ಪಾವತಿಯ ವಹಿವಾಟುಗಳನ್ನು ದಾಖಲಿಸಲಾಗುತ್ತಿದೆ. ಸ್ವೀಕೃತಿಗಳನ್ನು ಪ್ರಸ್ತುತ ಭಾಗಶಃ ಆನ್‌ಲೈನ್ ಮೂಲಕ ಸ್ವೀಕಾರ ಮಾಡಲಾಗುತ್ತಿದ್ದು, ಈ ವರ್ಷದಲ್ಲಿ ಎಲ್ಲಾ ಸ್ವೀಕೃತಿಗಳನ್ನು Receipt Module Software ಮೂಲಕ ಬ್ಯಾಂಕ್ ಪಾವತಿ ಗೇಟ್‌ವೇ ಗಳೊಂದಿಗೆ ಸಂಯೋಜಿಸಿ ಆನ್‌ಲೈನ್ ಮೂಲಕ ಸ್ವೀಕರಿಸಲು ಉದ್ದೇಶಿಸಲಾಗಿದೆ. ಇದರಿಂದಾಗಿ ಪಾಲಿಕೆಯ ಪಾವತಿ ಜೊತೆಗೆ ಸ್ವೀಕೃತಿ ಕೂಡ ನೈಜ-ಸಮಯದ ಆಧಾರದ ಮೇಲೆ ದಾಖಲಾಗುತ್ತದೆ.

46. ಪಾಲಿಕೆಯೊಳಗಿನ ಎಲ್ಲಾ ಆಂತರಿಕ ಮತ್ತು ಅಂತರ್-ಕಛೇರಿ ನಿಧಿ ವರ್ಗಾವಣೆಗಳು ಮತ್ತು ಶಾಸನಬದ್ಧ ಕಡಿತಗಳ ರವಾನೆಗಳನ್ನು ಪ್ರಸ್ತುತ ಆಫ್-ಲೈನ್ ಮೂಲಕ ದಾಖಲು ಮಾಡಲಾಗುತ್ತಿದೆ. ಈಗಾಗಲೇ ಚಾಲ್ತಿಯಲ್ಲಿರುವ ಐ.ಎಫ್.ಎಂ.ಎಸ್. ತಂತ್ರಾಂಶವನ್ನು ನವೀಕರಿಸಿ ಹೊಸ Fund Transfer Module and Remittances Module ಅನ್ನು ಅಭಿವೃದ್ಧಿಪಡಿಸಿ, ಆಂತರಿಕ ಮತ್ತು ಅಂತರ್-ಕಛೇರಿ ನಿಧಿ ವರ್ಗಾವಣೆಗಳು ಮತ್ತು ಶಾಸನಬದ್ಧ ಕಡಿತಗಳ ರವಾನೆಗಳನ್ನು Online ಮೂಲಕ ಕಾರ್ಯಗತಗೊಳಿಸಲಾಗುವುದು. ಇದು ನೈಜ-ಸಮಯದ ಆಧಾರದ ಮೇಲೆ ನಿಖರವಾದ ಮಾಹಿತಿಯನ್ನು ಒದಗಿಸುವ ಮೂಲಕ ಸಕಾಲಿಕ ನಿರ್ಧಾರಗಳಿಗಾಗಿ ಸರಿಯಾದ ಮಾಹಿತಿ ನಿರ್ವಹಣಾ ವ್ಯವಸ್ಥೆಯನ್ನು ಬಲಪಡಿಸುತ್ತದೆ.

## ತೋಟಗಾರಿಕೆ

47. ಹಸಿರಿಕರಣವು ಪರಿಸರದಲ್ಲಿ ಉತ್ತಮ ವಾತವರಣ ನಿರ್ಮಿಸಲು ಪ್ರಮುಖ ಪಾತ್ರ ವಹಿಸುತ್ತದೆ. ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ 496 ಉದ್ಯಾನವನಗಳಿದ್ದು 2025–26ನೇ ಸಾಲಿನಲ್ಲಿ ಉದ್ಯಾನವನಗಳ ನಿರ್ವಹಣೆಗಾಗಿ ರೂ.36.71 ಕೋಟಿಗಳ ಅನುದಾನ ಹಾಗೂ ಉದ್ಯಾನವನಗಳ ಅಭಿವೃದ್ಧಿ ಮತ್ತು ಮೇಲ್ದರ್ಜೆಗೇರಿಸುವ ಕೆಲಸಗಳಿಗೆ ರೂ.24.41 ಕೋಟಿಗಳ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. 2026–27ನೇ ಸಾಲಿನಲ್ಲಿ ಸದರಿ ಕಾರ್ಯಕ್ಕೆ ರೂ.47.45 ಕೋಟಿಗಳ ಅನುದಾನ ಹಾಗೂ ರೂ.6.32 ಕೋಟಿಗಳ ಅನುದಾನವನ್ನು ಕ್ರಮವಾಗಿ ಮೀಸಲಿರಿಸಿದೆ ಹಾಗೂ ಉದ್ಯಾನವನಗಳಿಗೆ ತಂತಿ ಬೇಲಿ ಅಳವಡಿಸಲು ರೂ.3.25 ಕೋಟಿಗಳ ಅನುದಾನವನ್ನು ಮೀಸಲಿಡಲಾಗಿದೆ.
48. ಪಶ್ಚಿಮ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಗರ ಹಸಿರೀಕರಣಕ್ಕೆ ಕಡಿಮೆ ಜಾಗದಲ್ಲಿ ವೇಗವಾಗಿ ದಟ್ಟವಾದ ನೈಸರ್ಗಿಕ ಅರಣ್ಯವನ್ನು ನಿರ್ಮಿಸಲು ಪ್ರತಿ ಕ್ಷೇತ್ರದಲ್ಲಿ ಅವಶ್ಯವಿರುವ ಉದ್ಯಾನವನಗಳು, ಶಾಲೆಗಳು, ರಸ್ತೆ ಬದಿಗಳ ಖಾಲಿ ಜಾಗಗಳಲ್ಲಿ ಸ್ಥಳೀಯ (native) ಸಸ್ಯ ಜಾತಿಗಳನ್ನು ಒಳಗೊಂಡಂತೆ ನಗರ ಹಸಿರೀಕರಣಕ್ಕೆ ಉತ್ತಮ ವಿಧಾನವಾದ '100 ಮಿಯಾವಾಕಿ ಕಾಡುಗಳನ್ನು' (Miyawaki Forest) ಸ್ಥಾಪಿಸಲು ಯೋಜನೆ ರೂಪಿಸಲಾಗುವುದು. ಸದರಿ ಉದ್ದೇಶಕ್ಕಾಗಿ ರೂ.1.00 ಕೋಟಿಗಳ ಅನುದಾನವನ್ನು ಮೀಸಲಿಡಲಾಗಿದೆ.
49. ಪಾಲಿಕೆಯ ಪ್ರತಿ ವಿಭಾಗಳಲ್ಲಿ ಕನಿಷ್ಠ 01 ರಂತೆ ವಿಶೇಷ ಚೇತನ ಸ್ನೇಹಿ ಉದ್ಯಾನವನ ಮತ್ತು ಸಾಕುಪ್ರಾಣಿ ಉದ್ಯಾನವನ (Domestic Animal Park) ಹಾಗೂ ಹಿರಿಯ ನಾಗರೀಕರಿಗೆ ವಾಚನಾಲಯವನ್ನು ಸ್ಥಾಪಿಸಲು ಯೋಜನೆ ರೂಪಿಸಲಾಗುವುದು.

50. ಪಶ್ಚಿಮ ನಗರ ಪಾಲಿಕೆಯ ಕಛೇರಿಗಳು, ಮೈದಾನಗಳು ಮತ್ತು ಪಾಲಿಕೆ ಆಸ್ತಿಗಳಲ್ಲಿ ಇಂಧನ ಉಳಿತಾಯ ಮತ್ತು ಪರಿಸರ ಸಂರಕ್ಷಣೆ ಹಿತದೃಷ್ಟಿಯಿಂದ Pay & Use ವಿದ್ಯುತ್ ಚಾರ್ಜಿಂಗ್ ಪಾಯಿಂಟ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಯೋಜನೆ ರೂಪಿಸಲಾಗುವುದು.
51. "ನಗರದಲ್ಲಿ ನೀರಿನ ಸಂರಕ್ಷಣೆ ಹಾಗೂ ಭೂಗರ್ಭ ಜಲಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ 20 ಉದ್ಯಾನವನಗಳಲ್ಲಿ ಮಳೆಯ ನೀರು ಸಂಗ್ರಹಣಾ ಘಟಕಗಳನ್ನು ಸ್ಥಾಪಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಪ್ರತಿ ಘಟಕವನ್ನು ರೂ.10.00 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗುವುದು, ಸದರಿ ಯೋಜನೆಯ ಮೂಲಕ ಪರಿಸರ ಸಂರಕ್ಷಣೆ, ನೀರಿನ ಸದ್ಬಳಕೆ ಹಾಗೂ ಉದ್ಯಾನವನಗಳ ಶಾಶ್ವತ ನಿರ್ವಹಣೆಗೆ ಉತ್ತೇಜನ ನೀಡಲಾಗುತ್ತದೆ. ಈ ಕ್ರಮದಿಂದ ಮಳೆಯ ನೀರನ್ನು ಪರಿಣಾಮಕಾರಿಯಾಗಿ ಸಂಗ್ರಹಿಸಿ ಭವಿಷ್ಯದ ನೀರಿನ ಅವಶ್ಯಕತೆಗಳನ್ನು ಪೂರೈಸುವತ್ತ ಮಹತ್ವದ ಹೆಜ್ಜೆ ಇಡಲಾಗುತ್ತದೆ." ಈ ಉದ್ದೇಶಕ್ಕಾಗಿ ಪ್ರಸ್ತುತ ಸಾಲಿನ ಆಯವ್ಯದಲ್ಲಿ ರೂ.2.00 ಕೋಟಿಗಳ ಅನುದಾನವನ್ನು ಮೀಸಲಿರಿಸಿದೆ.
52. ಆರೋಗ್ಯ ಮತ್ತು ಪರಿಸರ ರಕ್ಷಣೆಗಾಗಿ ಸೈಕಲ್ ಪಥ (Cycle Track) ಗಳನ್ನು ಪ್ರತಿ ವಿಭಾಗವಾರು ಕನಿಷ್ಠ 05 ಸ್ಥಳಗಳಲ್ಲಿ ಹಾಗೂ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ನಾಯಂಡಹಳ್ಳಿ ಕೆರೆಯ ಸುತ್ತ ನಿರ್ಮಿಸಲು ಯೋಜನೆ ರೂಪಿಸಲಾಗುವುದು.
53. ಪಾಲಿಕೆ ವ್ಯಾಪ್ತಿಯ ಉದ್ಯಾನವನಗಳು ಮತ್ತು ಆಟದ ಮೈದಾನಗಳಲ್ಲಿ ಖಾಸಗಿ ಸಂಸ್ಥೆಗಳ ಮೂಲಕ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸುವುದರೊಂದಿಗೆ ಸಾರ್ವಜನಿಕರಿಗೆ ಮನೋರಂಜನೆ ಒದಗಿಸುವುದಲ್ಲದೇ, ಪಾಲಿಕೆಗೂ ಸಹ ಆದಾಯವನ್ನು ನಿರೀಕ್ಷಿಸಬಹುದು.
54. ಮಹಾಲಕ್ಷ್ಮೀ ಲೇಔಟ್ ಕ್ಷೇತ್ರದ ಅಂಜನೇಯ ದೇವಸ್ಥಾನದ ಉದ್ಯಾನವನ, ಉಷಾ ಉದ್ಯಾನವನ, ಕುವೆಂಪು ಉದ್ಯಾನವನ

ಮತ್ತು ಕಿರ್ಲೋಸ್ಕರ್ ಕಾಲೋನಿ ಉದ್ಯಾನವನಗಳ ಸಮಗ್ರ ಅಭಿವೃದ್ಧಿಗಾಗಿ ಪ್ರಸಕ್ತ ಸಾಲಿನ ಆಯವ್ಯದಲ್ಲಿ ರೂ.5.00 ಕೋಟಿಗಳ ಅನುದಾನವನ್ನು ಮೀಸಲಿರಿಸಿದೆ.

**ಕೆರೆಗಳು**

55. ಬೆಂಗಳೂರು ಪಶ್ಚಿಮ ನಗರ ಪಾಲಿಕೆಯು ಯಶವಂತಪುರ, ದಾಸರಹಳ್ಳಿ, ರಾಜರಾಜೇಶ್ವರಿ ನಗರ, ಬಸವನಗುಡಿ, ವಿಜಯನಗರ, ಗೋವಿಂದರಾಜ ನಗರ, ಮಲ್ಲೇಶ್ವರಂ ಮತ್ತು ಪದ್ಮನಾಭ ನಗರ ವಿಧಾನಸಭಾ ಕ್ಷೇತ್ರದ ಒಟ್ಟು 49 ಕೆರೆಗಳನ್ನು ಹೊಂದಿದ್ದು, ಪಾಲಿಕೆಯು ಕೆರೆಗಳ ಪುನಶ್ಚೇತನ, ಅಭಿವೃದ್ದಿಗೊಳಿಸುವುದು ಹಾಗೂ ನಿರ್ವಹಿಸುವುದಲ್ಲದೇ, ಕೆರೆಯ ಪರಿಸರವನ್ನು ಸಂರಕ್ಷಿಸುವುದು ಹಾಗೂ ಜೀವವೈವಿಧ್ಯತೆಯನ್ನು ಉತ್ತೇಜಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ ಕೆರೆಗಳು ಅಂತರ್ಜಲವನ್ನು ಮತ್ತು ನಗರದ ವಾಸಯೋಗ್ಯತೆಯನ್ನು ಹೆಚ್ಚಿಸುವಲ್ಲಿ ಪಾತ್ರ ವಹಿಸುತ್ತವೆ.
56. 2025–26ನೇ ಸಾಲಿನಲ್ಲಿ ರೂ.4.20 ಕೋಟಿಗಳ ಅನುದಾನದಲ್ಲಿ 4 ಕೆರೆಗಳಲ್ಲಿ ಗಡಿಗಳಿಗೆ ಚೈನ್ ಲಿಂಕ್ ತಂತಿ ಬೇಲಿ ಅಳವಡಿಸುವ ಕಾರ್ಯ ಕೈಗೊಂಡಿದ್ದು ಕಾಮಗಾರಿ ಪ್ರಗತಿಯಲ್ಲಿರುತ್ತದೆ ಹಾಗು ಬ್ರಾಂಡ್ ಬೆಂಗಳೂರು ಅಡಿಯಲ್ಲಿ ರೂ.9.40 ಕೋಟಿಗಳ ಅನುದಾನದಲ್ಲಿ 3 ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ.
57. 8 ಕೆರೆಗಳ ಅಭಿವೃದ್ಧಿಗೆ 2025–26ನೇ ಸಾಲಿನಲ್ಲಿ ರೂ.14.50 ಕೋಟಿಗಳ ಅನುದಾನವನ್ನು ಒದಗಿಸಲಾಗಿ, ಈ ಪೈಕಿ ರೂ.3.00 ಕೋಟಿಗಳ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದ್ದು ಬಾಕಿ ಕಾಮಗಾರಿಗಳನ್ನು ಈ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಲಾಗುವುದು.

58. 2026–27ನೇ ಸಾಲಿನ ಆಯವ್ಯಯದಲ್ಲಿ ಒಟ್ಟು 7.50 ಕೋಟಿ ರೂ. ಅನುದಾನವನ್ನು ಕೆರೆಗಳ ಅಭಿವೃದ್ದಿಗಾಗಿ ಮೀಸಲಿರಿಸಿದ್ದು, ಕೆರೆಗಳ ವಾರ್ಷಿಕ ನಿರ್ವಹಣೆಗೆ ರೂ.7.50 ಕೋಟಿ ಹಾಗೂ ರೂ.6.25 ಕೋಟಿಗಳ ಅನುದಾನವನ್ನು ಗಡಿ ತಂತಿ ಬೇಲಿ ನಿರ್ಮಿಸಲು ಮೀಸಲಿಡಲಾಗಿದೆ.
59. ಈ ಪ್ರಸ್ತಾವನೆಯಲ್ಲಿ ಕೆರೆಗಳ ಪುನಶ್ಚೇತನ ಹಾಗೂ ಅಭಿವೃದ್ದಿ ಸೇರಿದಂತೆ ಕೆರೆಗಳ ನೀರಿನ ಗುಣಮಟ್ಟವನ್ನು ಸುಧಾರಿಸಲು ಏರೇಟರ್‌ಗಳು, ಜೈವಿಕ ಕಿಣ್ವಗಳ ಬಳಕೆ ಮತ್ತು ಡಿಜಿಟಲ್ ಉಪಕರಣಗಳನ್ನು ಸ್ಥಾಪಿಸುವುದು, ಸ್ಲೂಯಿಸ್ ಗೇಟ್‌ಗಳು, ಸಿ.ಸಿ.ಟಿವಿಗಳನ್ನು ಅಳವಡಿಸುವುದು ಮತ್ತು ಸಾರ್ವಜನಿಕ ಸ್ಥಳಗಳನ್ನು ಗುರುತಿಸಿ ಯೋಜನೆಯನ್ನು ಅನುಷ್ಠಾನಗೊಳಿಸುವ ಕಾಮಗಾರಿಗಳು ಒಳಗೊಂಡಿರುತ್ತದೆ.
60. ನಗರದ ಪರಿಸರ ಸಂರಕ್ಷಣೆ ಹಾಗೂ ಜಲಸಂಪನ್ಮೂಲಗಳ ಪುನರುಜ್ಜೀವನದ ದೃಷ್ಟಿಯಿಂದ ಯಡಿಯೂರು ಕೆರೆ ಹಾಗೂ ಚಿಕ್ಕಲ್ಲಸಂದ್ರ ಕೆರೆಯ ಸುತ್ತಮುತ್ತಲಿನ ಒತ್ತುವರಿ ತೆರವು, ಕೆರೆಯಲ್ಲಿ ಸಂಗ್ರಹವಾಗಿರುವ ಹೂಳನ್ನು ತೆಗೆಯುವುದರ ಮೂಲಕ ಅದರ ನೀರಿನ ಸಂಗ್ರಹ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ಹಾಗೂ ಸದರಿ ಕೆರೆಗಳ ಸಮಗ್ರ ಅಭಿವೃದ್ಧಿಯನ್ನು ಹಂತ ಹಂತವಾಗಿ ಮಾಡಲು, ಪ್ರಸ್ತುತ ಸಾಲಿನಲ್ಲಿ ರೂ.5.00 ಕೋಟಿಗಳ ಅನುದಾನ ಮೀಸಲಿರಿಸಿದೆ.

## ಶಿಕ್ಷಣ ಇಲಾಖೆ

61. ಪಶ್ಚಿಮ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ 28–ಶಿಶುವಿಹಾರ ಶಾಲೆಗಳು, 05–ಪ್ರಾಥಮಿಕ ಶಾಲೆಗಳು, 10–ಪ್ರೌಢಶಾಲೆಗಳು, 5–ಪದವಿ ಪೂರ್ವ ಕಾಲೇಜುಗಳು, 01–ಪದವಿ ಮತ್ತು 01–ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ ಸುಮಾರು 8205 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುತ್ತಾರೆ.

62. 2025–26ನೇ ಸಾಲಿನಲ್ಲಿ ಫಲಿತಾಂಶ ಹೆಚ್ಚಿಸಲು ಪಶ್ಚಿಮ ನಗರ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ಸ್ಮಾರ್ಟ್ ಶಿಕ್ಷಣವನ್ನು ಅಳವಡಿಸಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಗುಣವಾಗುವಂತೆ ಡಿಜಿಟಲ್ ಬೋರ್ಡ್ ಗಳನ್ನು ಅಳವಡಿಸಲಾಗಿರುತ್ತದೆ ಹಾಗೂ ಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ಮತ್ತು ಕಾಲೇಜುಗಳಲ್ಲಿ ಕಾಲೇಜು ಅಭಿವೃದ್ಧಿ ಸಮಿತಿಗಳನ್ನು ರಚಿಸಿ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಅಜೀಮ್ ಪ್ರೇಮ್‌ಜಿ ಫೌಂಡೇಷನ್ ವತಿಯಿಂದ ಶಾಲಾ/ಕಾಲೇಜು ನಿರ್ವಹಣೆಯ ಬಗ್ಗೆ ತರಬೇತಿಯನ್ನು ನೀಡಲಾಗಿರುತ್ತದೆ.
63. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರೂ.25,000/–ಗಳು ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ರೂ.35,000/–ಗಳು ಮತ್ತು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಅಂತಿಮ ಪದವಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ರೂ.35,000/–ಗಳಂತೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.
64. ಸರ್ಕಾರೇತರ ಸಂಸ್ಥೆಯ ವತಿಯಿಂದ ಪಶ್ಚಿಮ ನಗರ ಪಾಲಿಕೆಯ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ಆರೋಗ್ಯ ಸುಧಾರಣೆಗಾಗಿ ವೈದ್ಯಕೀಯ ತಪಾಸಣೆ, ಔಷಧಿಗಳ ವಿತರಣೆ, ಸ್ಯಾನಿಟರಿ ನ್ಯಾಪ್ಕಿನ್‌ಗಳ ವಿತರಣೆ, ನೂತನವಾಗಿ ಶೌಚಾಲಯಗಳನ್ನು ನಿರ್ಮಿಸಲು ಒಡಂಬಡಿಕೆ ಮಾಡಿಕೊಳ್ಳಲಾಗಿದೆ.
65. ಪಶ್ಚಿಮ ನಗರ ಪಾಲಿಕೆಯ ವ್ಯಾಪ್ತಿಯ ಶ್ರೀರಾಂಪುರದಲ್ಲಿ ಸಿ.ಬಿ.ಎಸ್.ಸಿ ಪಠ್ಯಕ್ರಮವುಳ್ಳ ಪಬ್ಲಿಕ್ ಶಾಲೆಯನ್ನು ಭಾರತೀಯ ವಿದ್ಯಾಭವನ ಹಾಗೂ ಬಿ.ಬಿ.ಎಂ.ಪಿ ಸಹಯೋಗದೊಂದಿಗೆ 2011–12ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲಾಗಿರುತ್ತದೆ. ಪ್ರತಿ ವರ್ಷವೂ ನರ್ಸರಿ ತರಗತಿಗೆ 30 ವಿದ್ಯಾರ್ಥಿಗಳನ್ನು ಬಿ.ಬಿ.ಎಂ.ಪಿ

ಕೋಟಾದಡಿಯಲ್ಲಿ ಕರ್ನಾಟಕ ಸರ್ಕಾರದ ರೋಸ್ಟರ್ ನಿಯಮದಂತೆ ದಾಖಲು ಮಾಡಿಕೊಳ್ಳಲಾಗುತ್ತದೆ. ನರ್ಸರಿಯಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ತಲಾ ರೂ.7000/–ಗಳಂತೆ ಶುಲ್ಕವನ್ನು ಪಾಲಿಕೆಯ ವತಿಯಿಂದ ಭಾರತೀಯ ವಿದ್ಯಾಭವನ ಸಂಸ್ಥೆಯವರಿಗೆ ಪಾವತಿಸಲಾಗುತ್ತಿರುತ್ತದೆ.

66. ಪಶ್ಚಿಮ ನಗರ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪಾಲಿಕೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ನಮ್ಮ ಕ್ಲಿನಿಕ್ ವೈದ್ಯರುಗಳ ಮೂಲಕ ಆರೋಗ್ಯ ತಪಾಸಣೆ ಕೈಗೊಳ್ಳಲಾಗುತ್ತಿದೆ ಹಾಗೂ ವಿದ್ಯಾರ್ಥಿಗಳು ಮತ್ತು ಅವರ ಪೋಷಕರುಗಳಿಗೆ ಆಯುಷ್ಮಾನ್ ಭಾರತ್ ಆರೋಗ್ಯ ವಿಮೆ ಯೋಜನೆಯಡಿಯಲ್ಲಿ ಉಚಿತ ಆರೋಗ್ಯ ವಿಮೆ ಕೈಗೊಳ್ಳಲಾಗುತ್ತಿದೆ.

67. 2025–26ನೇ ಸಾಲಿಗೆ ಪಾಲಿಕೆಯ ಶಿಕ್ಷಣ ಇಲಾಖೆ ವತಿಯಿಂದ ಉಚಿತವಾಗಿ ಪಾಲಿಕೆಯ ಶಾಲಾ ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ಪ್ರವಾಸೋಧ್ಯಮ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯ ವತಿಯಿಂದ ಒಂದು ದಿನದ ಶೈಕ್ಷಣಿಕ ಪ್ರವಾಸವನ್ನು ಕೈಗೊಳ್ಳಲಾಗುತ್ತಿದ್ದು ಪ್ರಸಕ್ತ ಸಾಲಿನಿಂದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ "ಕರ್ನಾಟಕ ದರ್ಶನ" ಶೈಕ್ಷಣಿಕ ಪ್ರವಾಸ ಕಾರ್ಯಕ್ರಮದ ಅಡಿ ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ, ಕರಾವಳಿ ಕರ್ನಾಟಕ ಭಾಗಗಳ ಐತಿಹಾಸಿಕ ಸ್ಥಳಗಳನ್ನೊಳಗೊಂಡಂತೆ 03 ದಿನಗಳ ಶೈಕ್ಷಣಿಕ ಪ್ರವಾಸವನ್ನು ಕೈಗೊಳ್ಳಲಾಗುವುದು. ಇದಕ್ಕಾಗಿ ರೂ.2.00 ಕೋಟಿಗಳನ್ನು ಮೀಸಲಿರಿಸಿದೆ.

68. ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ (1) ಶಕ್ತಿಗಣಪತಿ ನಗರ (2) ಶ್ರೀರಾಮಪುರ (3) ಕೋದಂಡರಾಮಪುರ (4) ಬಸವನಗುಡಿ (5) ವಿಜಯನಗರ ವ್ಯಾಪ್ತಿಯಲ್ಲಿನ ಶಾಲೆಗಳ ವಿದ್ಯಾರ್ಥಿಗಳಿಗೆ ಸುಲಭ, ಆಸಕ್ತಿದಾಯಕ ಮತ್ತು ಗುಣಮಟ್ಟದ ಶಿಕ್ಷಣ ನೀಡುವ

ಸಲುವಾಗಿ ಒಟ್ಟು 5 ಸಂಖ್ಯೆಯ ಆಯ್ದ ಶಾಲೆಗಳನ್ನು 'ಸ್ಮಾರ್ಟ್ ಶಾಲೆಗಳನ್ನಾಗಿ' ಪರಿವರ್ತಿಸಲಾಗುವುದು. ಇದಕ್ಕಾಗಿ ರೂ.1.00 ಕೋಟಿಗಳನ್ನು ಮೀಸಲಿರಿಸಿದೆ.

69. ವಿದ್ಯಾರ್ಥಿಗಳ ಸುರಕ್ಷತೆ ಹಾಗೂ ಗುಣಮಟ್ಟದ ಡಿಜಿಟಲ್ ಶಿಕ್ಷಣವನ್ನು ಉತ್ತೇಜಿಸುವ ಉದ್ದೇಶದಿಂದ 'ಸೇಫ್ ಸ್ಕೂಲ್' ಯೋಜನೆಯನ್ನು ಹಂತ ಹಂತವಾಗಿ ಜಾರಿಗೆ ತರಲಾಗುತ್ತದೆ. ಈ ಯೋಜನೆಯಡಿ ಶಾಲಾ ಪರಿಸರದಲ್ಲಿ ಸಿಸಿಟಿವಿ ಮೇಲ್ವಿಚಾರಣೆ, ಭದ್ರತಾ ಕ್ರಮಗಳು, ಸ್ವಚ್ಛತಾ ಸೌಲಭ್ಯಗಳು ಹಾಗೂ ಸುರಕ್ಷಿತ ಮೂಲಸೌಕರ್ಯವನ್ನು ಕಲ್ಪಿಸಲಾಗುತ್ತದೆ.

70. ಪಾಲಿಕೆಯ ಪ್ರತಿ ವಲಯದ ವ್ಯಾಪ್ತಿಯಲ್ಲಿ ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ವಿವಿಧ ಸೌಲಭ್ಯಗಳ, ವೇಗವಾದ ಮತ್ತು ಹೆಚ್ಚಿನ ಮಾಹಿತಿಯನ್ನು ನೀಡುವ ಪರಿಸರ ಸ್ನೇಹಿ ಗಣಕೀಕೃತ ಗ್ರಂಥಾಲಯ (Digital Library) ನಿರ್ಮಿಸಲಾಗುವುದು.

71. ಕರ್ನಾಟಕ ಸರ್ಕಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ "ಶುಚಿ ಕಾರ್ಯಕ್ರಮದ" ಅಡಿಯಲ್ಲಿ ಪಶ್ಚಿಮ ನಗರ ಪಾಲಿಕೆಯ ಪ್ರಾಥಮಿಕ ಶಾಲೆಯ 5ನೇ ತರಗತಿಯಿಂದ ಸ್ನಾತಕೋತ್ತರ ಪದವಿ ಕಾಲೇಜುಗಳ ವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರುಗಳಿಗೆ ಉಚಿತ ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಿಸಲಾಗಿರುತ್ತದೆ ಹಾಗೂ ವಿದ್ಯಾರ್ಥಿನಿಯರ ಹಿತದೃಷ್ಠಿಯಿಂದ ಸ್ಯಾನಿಟರಿ ಪ್ಯಾಡ್ ದಹಿಸುವ (Incinerator) ಯಂತ್ರಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ.

72. ಪಾಲಿಕೆಯ ಎಲ್ಲಾ ಶಾಲಾ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಪಠ್ಯ ಕ್ರಮ ಕಲಿಕೆಯ ಜೊತೆಗೆ ಇತರೆ ಹವ್ಯಾಸಿ ಕ್ರೀಡೆ ಮತ್ತು ಕಲೆಗೆ (ಸ್ಕೇಟಿಂಗ್, ಬ್ಯಾಡ್ಮಿಂಟನ್, ಕರಾಟೆ, ಸಂಗೀತಾ, ರಂಗಭೂಮಿಕಲೆ, ಕ್ರಿಕೆಟ್, ಸ್ವಿಮಿಂಗ್ ಇತರೆ) ಸಂಬಂಧಿಸಿದಂತೆ ಪ್ರತಿಷ್ಠಿತ

ಸಂಸ್ಥೆಗಳಿಂದ ತರಬೇತಿ ನೀಡುವುದರ ಜೊತೆಗೆ ಅಗತ್ಯ ಪರಿಕರಗಳ ಕಿಟ್ ಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

73. ಬಸವನಗುಡಿ ವಿಧಾನಸಭಾ ಕ್ಷೇತ್ರದ ಕೆಂಪಾಬುದಿ ವಾರ್ಡ್-101ರ ಪಾಲಿಕೆಯ ಶಾಲಾ ಕಟ್ಟಡಕ್ಕೆ ಹೆಚ್ಚುವರಿ ಅಂತಸ್ತು ಮತ್ತು ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ರೂ.2.00 ಕೋಟಿಗಳನ್ನು ಮೀಸಲಿಡಲಾಗಿದೆ.

74. ಒಟ್ಟಾರೆಯಾಗಿ ಈ ವರ್ಷದ ಆಯವ್ಯಯದಲ್ಲಿ ಶಿಕ್ಷಣಕ್ಕಾಗಿ ರೂ.44.35 ಕೋಟಿಗಳನ್ನು ಮೀಸಲಿರಿಸಿದೆ.

## ಆರೋಗ್ಯ

75. ಪಶ್ಚಿಮ ನಗರ ಪಾಲಿಕೆಯ ಆರೋಗ್ಯ ವಿಭಾಗದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ, 3 ರೆಫರಲ್ ಆಸ್ಪತ್ರೆ ಮತ್ತು 11 ಹೆರಿಗೆ ಆಸ್ಪತ್ರೆಗಳು ಹಾಗೂ ಒಂದು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ತಾಯಿ ಮತ್ತು ಮಕ್ಕಳಿಗೆ ಹಾಗೂ ಇತರೇ ಸಾಮಾನ್ಯ ಕಾಯಿಲೆಗಳಿಗೆ ಉಚಿತ ಸೇವೆಗಳನ್ನು ನೀಡಲಾಗುತ್ತಿದೆ. ವಾರ್ಷಿಕ ಅಂದಾಜು 50,000 ಗರ್ಭಿಣಿಯರಿಗೆ ತಪಾಸಣೆ, 7000 ಹೆರಿಗೆಗಳು (ಸಹಜ ಹೆರಿಗೆ-4000, ಸಿಸೇರಿಯನ್-3000), 2000 ಸಂತಾನಹರಣ ಶಸ್ತ್ರಚಿಕಿತ್ಸೆಗಳು, 3000 ಕುಟುಂಬ ಯೋಜನಾ ಸೇವೆಗಳು, ಮೇಜರ್ ಸರ್ಜರಿಗಳು-100, ನಾಯಿ ಕಡಿತಕ್ಕೆ 6000 ಜನರಿಗೆ ಚಿಕಿತ್ಸೆ, 2000 ಒಳರೋಗಿಗಳ ತಪಾಸಣೆ, 01 ಲಕ್ಷ ಹೊರ ರೋಗಿಗಳಿಗೆ ಚಿಕಿತ್ಸೆ (ಮಕ್ಕಳಿಗೆ ಅಂದಾಜು 30,000) ಚಿಕಿತ್ಸೆ ಹಾಗೂ ಅಂದಾಜು 1.5 ಲಕ್ಷ ಲ್ಯಾಬ್ ಪರೀಕ್ಷೆ, 300 X-ray, 700-Scan, 30-ಮ್ಯಾಮೋಗ್ರಫಿ ಸೇವೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಹೊಸಹಳ್ಳಿ ರೆಫರಲ್ ಆಸ್ಪತ್ರೆಯು ಇಡೀ ರಾಜ್ಯದ ವೈದ್ಯರುಗಳಿಗೆ ಮತ್ತು ಸಿಬ್ಬಂದಿಗಳಿಗೆ ಲ್ಯಾಪ್ರೋಸ್ಕೋಪಿಕ್ ಸಂತಾನ ಹರಣ ಶಸ್ತ್ರಚಿಕಿತ್ಸೆ ತರಬೇತಿ ಸಂಸ್ಥೆಯಾಗಿದೆ. ಬೆಂಗಳೂರಿನ

ಸರ್ಕಾರಿ/ಖಾಸಗಿ ಮೆಡಿಕಲ್ ಕಾಲೇಜು, ನರ್ಸಿಂಗ್ ಕಾಲೇಜು ವಿಧ್ಯಾರ್ಥಿಗಳು ಈ ಎಲ್ಲಾ ಆಸ್ಪತ್ರೆಗಳಲ್ಲಿ ತರಬೇತಿ ಪಡೆಯುತ್ತಿದ್ದಾರೆ.

76. ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಆರೋಗ್ಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ 15 ಆಸ್ಪತ್ರೆಗಳಲ್ಲಿ, ಈ ಕೆಳಗಿನ 06 ಆಸ್ಪತ್ರೆಗಳನ್ನು "ಬ್ರ್ಯಾಂಡ್ ಬೆಂಗಳೂರು ಯೋಜನೆ" ಅಡಿಯಲ್ಲಿ ರೂ.95.73 ಕೋಟಿಗಳ ವೆಚ್ಚದಲ್ಲಿ ಉನ್ನತೀಕರಿಸಲಾಗುತ್ತಿದೆ.

- ಶ್ರೀರಾಂಪುರ ರೆಫರಲ್ ಆಸ್ಪತ್ರೆ,
- ಆಜಾದ್‌ನಗರ ಹೆರಿಗೆ ಆಸ್ಪತ್ರೆ,
- ನಂದಿನಿ ಲೇಔಟ್ ಹೆರಿಗೆ ಆಸ್ಪತ್ರೆ,
- ಪ್ಯಾಲೆಸ್ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆ,
- ಮೂಡಳಪಾಳ್ಯ ಹೆರಿಗೆ ಅಸ್ಪತ್ರೆ,
- ಎಂ.ಸಿ. ಲೇಔಟ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ

ಸದರಿ 06 ಆಸ್ಪತ್ರೆಗಳನ್ನು IPHS 2022 ರ ಅನ್ವಯ ಮೇಲ್ದರ್ಜೆಗೇರಿಸಿ ಉತ್ತಮ ಗುಣಮಟ್ಟದ ವಿವಿಧ ಆಧುನಿಕ ಆರೋಗ್ಯ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸದರಿ 6 ಆಸ್ಪತ್ರೆಗಳಲ್ಲಿ ಸುಸಜ್ಜಿತ ವೈದ್ಯಕೀಯ ಉಪಕರಣಗಳನ್ನೊಳಗೊಂಡು ತಾಯಿ ಮತ್ತು ಮಕ್ಕಳ ಆರೋಗ್ಯ ರಕ್ಷಣೆಯ ಜೊತೆಗೆ ಇನ್ನಿತರೇ ರೋಗಿಗಳಿಗೂ ವಿವಿಧ ತಜ್ಞ ವೈದ್ಯರುಗಳಿಂದ ತಪಾಸಣೆ, ಚಿಕಿತ್ಸೆ ಮತ್ತು ಇನ್ನಿತರೇ ಆರೋಗ್ಯ ಸೌಲಭ್ಯಗಳನ್ನು ಉನ್ನತೀಕರಿಸಲು ಉದ್ದೇಶಿಸಿ ಕ್ರಿಯಾಯೋಜನೆ ತಯಾರಿಸಲಾಗಿದೆ.

ಸದರಿ ಆಸ್ಪತ್ರೆಗಳಿಗೆ ಕಟ್ಟಡಗಳ ನಿರ್ಮಾಣ, ಆಧುನೀಕರಣ, ಮಾಡ್ಯುಲರ್ ಆಪರೇಷನ್ ಥಿಯೇಟರ್ (OT), ಪ್ರಸೂತಿ ಕೊಠಡಿ (Labour Room), ಪ್ರಯೋಗಾಲಯ (Laboratory) ಸ್ಥಾಪನೆ,

ಹೆಚ್ಚುವರಿ ವಾರ್ಡ್‌ಗಳ ನಿರ್ಮಾಣ, ಅಗತ್ಯವಿರುವ ವಿದ್ಯುತ್ ಕಾಮಗಾರಿಗಳು, 100 ಕೆವಿ ಟ್ರಾನ್ಸ್‌ಫಾರ್ಮರ್, 100 ಕೆವಿಎ ಜನರೇಟರ್, ಅಗ್ನಿ ಸುರಕ್ಷತಾ ವ್ಯವಸ್ಥೆ ಮತ್ತು ಅಲಾರ್ಮ್, ಶಸ್ತ್ರಚಿಕಿತ್ಸಾ ಕೊಠಡಿ ಮತ್ತು ಪ್ರಯೋಗಾಲಯಗಳಿಗೆ UPS ವ್ಯವಸ್ಥೆ, ಅಗತ್ಯವಿರುವ ವೈದ್ಯಕೀಯ ಉಪಕರಣಗಳು, ಆಸ್ಪತ್ರೆಯ ಫರ್ನಿಚರ್‌ಗಳು, ALS ಆಂಬುಲೆನ್ಸ್ ಹಾಗು ಇತರೆ ಹೆಚ್ಚುವರಿ ಸೌಲಭ್ಯಗಳನ್ನು ನೀಡಲು ಯೋಜನಾ ಅನುಷ್ಠಾನ ಘಟಕ (Program Implementation Unit) ವಿಭಾಗದಿಂದ ಟೆಂಡರ್ ಕರೆಯಲಾಗಿದೆ.

ಈ ಎಲ್ಲಾ ಉನ್ನತೀಕರಣ ಕಾಮಗಾರಿಗಳಿಗೆ ಒಟ್ಟು ರೂ.64.68 ಕೋಟಿ, ಆಧುನಿಕ ಯಂತ್ರೋಪಕರಣಗಳಿಗೆ ರೂ.27.29 ಕೋಟಿ ಮತ್ತು ತುರ್ತುವಾಹನ, ತಂತ್ರಾಂಶ ಇತ್ಯಾದಿ ಸೌಲಭ್ಯಗಳಿಗಾಗಿ ರೂ.3.76 ಕೋಟಿಗಳು ವೆಚ್ಚವಾಗುತ್ತಿದ್ದು, ಪಾಲಿಕೆ ವತಿಯಿಂದ ಚಾಲ್ತಿವರ್ಷ ಸೇರಿ ಮುಂದಿನ 02 ವರ್ಷದ ಆಯವ್ಯಯದಲ್ಲಿ ರೂ.95.73 ಕೋಟಿಗಳ ಅನುದಾನವನ್ನು ಕಾಯ್ದಿರಿಸಲಾಗಿದೆ. ಈ ಬ್ರಾಂಡ್ ಬೆಂಗಳೂರು ಯೋಜನೆಯು ಆರೋಗ್ಯ ಇಲಾಖೆಗೆ ಒಂದು ಅತ್ಯುತ್ತಮ ಕೊಡುಗೆಯಾಗಿದೆ. ಪ್ರಸಕ್ತ ಸಾಲಿನಲ್ಲಿ ಬ್ರಾಂಡ್ ಬೆಂಗಳೂರು–ಆರೋಗ್ಯಕರ ಬೆಂಗಳೂರು ಅಡಿ ರೂ.35.00 ಕೋಟಿಗಳ ಅನುದಾನವನ್ನು ಮೀಸಲಿರಿಸಿದೆ.

77. ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ 44 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 77 ನಮ್ಮ ಕ್ಲಿನಿಕ್ ಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರಿಗೆ ಹೊರ ರೋಗಿ ಚಿಕಿತ್ಸೆಯೊಂದಿಗೆ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ಆರೋಗ್ಯ ಕಾರ್ಯಕ್ರಮಗಳಾದ ತಾಯಿ ಮತ್ತು ಮಕ್ಕಳ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಯೋಜನೆ, ಲಸಿಕೆ

ಕಾರ್ಯಕ್ರಮ, ಕ್ಷಯಾ ರೋಗ ನಿರ್ಮೂಲನ ಕಾರ್ಯಕ್ರಮ, ರೋಗವಾಹಕಗಳ ಆಶ್ರಿತ ರೋಗಗಳ ನಿಯಂತ್ರಣ, ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ರೋಗಗಳ ನಿಯಂತ್ರಣ, ರೇಬಿಸ್ ನಿಯಂತ್ರಣ ಕಾರ್ಯಕ್ರಮ ಅಡಿಯಲ್ಲಿ ನಾಯಿ ಕಚ್ಚಿದವರಿಗೆ ಚುಚ್ಚು ಮದ್ದು ನೀಡುವುದು, ರಾಷ್ಟೀಯ ಬಾಲಸ್ವಾಸ್ಥ್ಯ ಕಾರ್ಯಕ್ರಮ, ಏಡ್ಸ್ ನಿಯಂತ್ರಣ ಕಾರ್ಯಕ್ರಮ, ತಂಬಾಕು ನಿಯಂತ್ರಣ ಕಾರ್ಯಕ್ರಮ, ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಮಾನಸಿಕ ಆರೋಗ್ಯ ನಿಯಂತ್ರಣ ಕಾರ್ಯಕ್ರಮ ಇತ್ಯಾದಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು. ಸದರಿ ಕಾರ್ಯಕ್ರಮಕ್ಕೆ ಅವಶ್ಯವಿರುವ ರಿಯೇಜೆಂಟ್ಸ್ (Reagents) ಗಳನ್ನು ಪಾಲಿಕೆಯಿಂದ ಒದಗಿಸಲಾಗುತ್ತಿದೆ.

78. ಸಾರ್ವಜನಿಕ ಆರೋಗ್ಯ ಹಿತಾದೃಷ್ಟಿಯಿಂದ ತಜ್ಞರ ಸೇವೆಯನ್ನು ಒದಗಿಸುವ ಸಲುವಾಗಿ ಸದಾಶಿವಾನಗರದಲ್ಲಿ ಸೆಂಟ್ರಲ್ ಕ್ಲಿನಿಕಲ್ ಕಮಾಂಡ್ ಸೆಂಟರ್ ಮತ್ತು 28 ಸ್ಮಾರ್ಟ್ ವರ್ಚುವಲ್ ಕ್ಲಿನಿಕ್‌ಗಳನ್ನು ತೆರೆಯಲಾಗಿದ್ದು ಸದರಿ ಯೋಜನೆಯನ್ನು ಪಶ್ಚಿಮ ಪಾಲಿಕೆಯ ಇನ್ನು 20 ಆರೋಗ್ಯ ಕೇಂದ್ರಗಳಲ್ಲಿ ವಿಸ್ತರಿಸಲಾಗುವುದು ಇದಕ್ಕಾಗಿ ಅಂದಾಜು ರೂ.4.00 ಕೋಟಿ ಹೆಚ್ಚುವರಿ ಅನುದಾನವನ್ನು ಮೀಸಲಿರಿಸಲಾಗಿದೆ.

79. ಸೊಳ್ಳೆಗಳಿಂದ ಹರಡುವ ರೋಗಗಳ ನಿಯಂತ್ರಣಕ್ಕಾಗಿ ಗ್ಯಾಂಗ್ ಮ್ಯಾನ್‌ಗಳನ್ನು ಉಪ ವಿಭಾಗವಾರು ಆಟೋಗಳನ್ನು ನಿಯೋಜಿಸಿಕೊಂಡು ಸ್ಪ್ರೇಯಿಂಗ್, ಫಾಗಿಂಗ್ ಹಾಗೂ ಪವರ್ ಸ್ಪ್ರೇ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಇದಕ್ಕಾಗಿ ರೂ.9.00 ಕೋಟಿ ಮೀಸಲಿಡಲಾಗಿದೆ. ಬ್ರಾಂಡ್ ಬೆಂಗಳೂರು ಯೋಜನೆ ಅಡಿ ಆರೋಗ್ಯ ಕೇಂದ್ರಗಳನ್ನು ಮತ್ತು ನಮ್ಮ ಕ್ಲಿನಿಕ್‌ಗಳನ್ನು ಉನ್ನತೀಕರಣಗೊಳಿಸಲಾಗುತ್ತಿದೆ.

80. ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಗೋವಿಂದರಾಜನಗರದ BBMP ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಜಯದೇವ ಹೃದೋಗ

ಸಂಸ್ಥೆಯ ಪ್ರಾದೇಶಿಕ ಕೇಂದ್ರವನ್ನು ಸ್ಥಾಪಿಸಲು ಅಂದಾಜಿಸಿರುವ ವೆಚ್ಚ ರೂ.25.00 ಕೋಟಿಗಳ ಪೈಕಿ ರಾಜ್ಯ ಸರ್ಕಾರದ ಆಯವ್ಯಯ ಘೋಷಣೆ ಕಂಡಿಕೆ ಸಂಖ್ಯೆ 164 ರಲ್ಲಿ ರೂ.15.00 ಕೋಟಿಗಳ ಅನುದಾನವನ್ನು ಮೀಸಲಿಡಲಾಗಿದೆ ಹಾಗೂ ಪಶ್ಚಿಮ ನಗರ ಪಾಲಿಕೆಯಿಂದ ಉಳಿದ ಮೊತ್ತ ರೂ.10.00 ಕೋಟಿಗಳ ಅನುದಾನವನ್ನು ಸದರಿ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿದೆ.

**ಪಶುಪಾಲನೆ**

81. ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲೂ ABC-ARV (Animal Birth Control-Anti Rabis Vaccine), CV (Combined Vaccine) ಸಂಬಂಧಿತ ಕಾರ್ಯಕ್ರಮಗಳನ್ನು ಮುಂದುವರೆಸಲಾಗುವುದು. ಇದರಿಂದ ಸಂಪೂರ್ಣ ರೇಬೀಸ್ ಮುಕ್ತ, ಪ್ರಾಣಿ ಕ್ರೌರ್ಯ ಮುಕ್ತ, ಆರೋಗ್ಯದಾಯಕ ಹಾಗೂ ಜನ–ಜಾನುವಾರು ಸ್ನೇಹಿ ಸಮಾಜ ನಿರ್ಮಾಣ ಮಾಡಲು ಬೆಂಗಳೂರು ಪಶ್ಚಿಮ ನಗರ ಪಾಲಿಕೆಯು ಕಂಕಣ ಬದ್ಧವಾಗಿದೆ. ಇದಕ್ಕಾಗಿ ಆಯವ್ಯದಲ್ಲಿ ರೂ.1.12 ಕೋಟಿಗಳ ಅನುದಾವನ್ನು ಮೀಸಲಿರಿಸಿದೆ.
82. ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಪಶುಪಾಲನಾ ಇಲಾಖೆಯು ಪ್ರಾಣಿಜನ್ಯ ಮಾನವ ರೋಗಗಳನ್ನೊಳಗೊಂಡು ಇತರೆ ರೋಗಗಳನ್ನು (ಬಿಡಾಡಿ ಜಾನುವಾರುಗಳಿಂದ) ತಡೆಯುವುದು ಮತ್ತು ಉತ್ತಮ ಗುಣಮಟ್ಟದ ಆರೋಗ್ಯದಾಯಕ ಪ್ರಾಣಿಜನ್ಯ ಪೌಷ್ಠಿಕ ಆಹಾರದ ಸರಬರಾಜಿನ ಜವಾಬ್ದಾರಿಯನ್ನು ನಿರ್ವಹಿಸಲು ಹಾಗೂ ಜನಸಾಮಾನ್ಯರಿಗೆ ಜಾನುವಾರುಗಳ ಸ್ನೇಹಿಯಾಗಿಸಲು ಪ್ರಸ್ತುತ ಕಾರ್ಯಕ್ರಮಗಳನ್ನು ಉತ್ತಮಗೊಳಿಸಿ, ಗಮನಾರ್ಹ ನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

    - 2026–27ನೇ ಸಾಲಿನಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಕನಿಷ್ಟ ಒಂದು ವಾರ್ಡ್ ನಂತೆ ಪಾಲಿಕೆಯಲ್ಲಿ ಒಟ್ಟಾರೆ 20 ವಾರ್ಡ್‌ಗಳನ್ನು ಪಶುಪಾಲನಾ ಇಲಾಖೆಯ ಮಾದರಿ ವಾರ್ಡ್‌ಗಳನ್ನಾಗಿಸುವುದು.

- ಕನಿಷ್ಟ 70% ಬೀದಿನಾಯಿಗಳನ್ನು ಸಂತಾನ ಹರಣ ಶಸ್ತ್ರ ಚಿಕಿತ್ಸೆ, ARV + CV ಲಸಿಕೆಗೊಳಪಡಿಸುವುದು.
- ಜನ ಸಾಮಾನ್ಯರಲ್ಲಿ ಬೀದಿ ನಾಯಿಗಳು ಪ್ರಾಣಿಜನ್ಯ ರೋಗಗಳು, ಸಹಬಾಳ್ವೆ ಮತ್ತು ಪ್ರಾಣಿ ದತ್ತು ತೆಗೆದುಕೊಳ್ಳುವ ಬಗ್ಗೆ ಅರಿವು ಮೂಡಿಸುವುದು,
- ದತ್ತು ಪಡೆದ ಬೀದಿ ನಾಯಿಗಳಿಗೆ ಉಚಿತ ಲಸಿಕೆ, ಸಾಮಾನ್ಯ ಚಿಕಿತ್ಸೆ ನೀಡುವುದು.
- ಸಂಪೂರ್ಣ ಶುಚಿಯಾದ ಪರವಾನಗಿ ಹೊಂದಿದ ಮಾಂಸದ ಅಂಗಡಿಗಳನ್ನು ಸ್ಥಾಪಿಸುವುದು.
- ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕನಿಷ್ಟ ಒಂದು ಪಾರ್ಕ್‌ನನ್ನು ಸಾಕು ಪ್ರಾಣಿ ಸ್ನೇಹಿ ಪಾರ್ಕ್ ಆಗಿಸುವುದು.

83. ಬೀದಿ ನಾಯಿಗಳಿಗೆ 500 ಸಾಮರ್ಥ್ಯದ ಆಶ್ರಯ ತಾಣವನ್ನು ನಿರ್ಮಿಸಿ ನಿರ್ವಹಣೆ ಮಾಡಲಾಗುವುದು ಹಾಗೂ 200 Kennel ಸಾಮರ್ಥ್ಯದ ABC (Animal Birth Control) ಕೇಂದ್ರವನ್ನು ಸ್ಥಾಪಿಸಲಾಗುವುದು, ಈ ಉದ್ದೇಶಕ್ಕಾಗಿ ಆಯವ್ಯದಲ್ಲಿ ರೂ.2.00 ಕೋಟಿಗಳ ಅನುದಾನವನ್ನು ಮೀಸಲಿರಿಸಿದೆ.

## ಸಾರ್ವಜನಿಕ ಕಾಮಗಾರಿಗಳು

84. ಪಶ್ಚಿಮ ನಗರ ಪಾಲಿಕೆಯ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗಾಗಿ, ಪಾಲಿಕೆಯ ವ್ಯಾಪ್ತಿಯಲ್ಲಿ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ಗುಣಮಟ್ಟ ಹೆಚ್ಚಿಸಿ, ಅಗತ್ಯ ನವೀನ ತಾಂತ್ರಿಕ ಮಾರ್ಗೋಪಾಯಗಳನ್ನು ಅಳವಡಿಸಿಕೊಂಡು ಕಾಮಗಾರಿ ವೆಚ್ಚವನ್ನು ಕಡಿಮೆ ಮಾಡುವುದರ ಮೂಲಕ ಸುವ್ಯವಸ್ಥಿತ ಸದೃಡ ಪಾಲಿಕೆಯ ಕಟ್ಟಡಗಳು, ರಸ್ತೆಗ್ಳು, ಪಾದಾಚಾರಿ ಮಾರ್ಗಗಳು,

ಸೇತುವೆಗಳ ನಿರ್ಮಾಣ ಹಾಗೂ ಸುರಕ್ಷಿತ ನಿರ್ವಹಣೆ ಹಾಗೂ ಇತರೆ ಗುಣಮಟ್ಟದ ಸಾರ್ವಜನಿಕ ಆಸ್ತಿಗಳ ನಿರ್ಮಾಣ ಮಾಡುವುದು ಸಾರ್ವಜನಿಕ ಕಾಮಗಾರಿ ಇಲಾಖೆಯ ಧ್ಯೇಯವಾಗಿರುತ್ತದೆ.

85. ವಿಜಯನಗರ ವಿಧಾನಸಭಾ ಕ್ಷೇತ್ರದಲ್ಲಿ 2025–26ನೇ ಸಾಲಿನ ಬಿಬಿಎಂಪಿ ಹಾಗೂ ಕರ್ನಾಟಕ ಸರ್ಕಾರದ ಅನುದಾನದಡಿಯಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತಹ ವಿವಿಧೋದ್ದೇಶ ಕಾಮಗಾರಿಗಳನ್ನು ಅಂದಾಜಿಸಿ ಪೂರ್ಣಗೊಳಿಸಲಾಗುತ್ತದೆ. ಅದರಲ್ಲಿ ಮೊದಲನೆಯದಾಗಿ ಚಂದ್ರ ಲೇಔಟ್ ಸರ್ಕಲ್ ನಲ್ಲಿ 215 ಅಡಿ ಎತ್ತರದ ಧ್ವಜಸ್ಥಂಭವನ್ನು ರೂ.5.00 ಕೋಟಿಗಳಲ್ಲಿ ನಿರ್ಮಾಣ ಮಾಡಿ ಪ್ರತಿವರ್ಷ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಗುತ್ತಿರುತ್ತದೆ ಮತ್ತು ವಿಜಯನಗರ ಮಾರ್ಕೆಟ್ ಪ್ರದೇಶದಲ್ಲಿ ಬೀದಿಬದಿ ವ್ಯಾಪಾರಗಳಿಗೆ ಅನುಕೂಲವಾಗುವಂತೆ ರೂ.11.00 ಕೋಟಿಗಳ ವೆಚ್ಚದಲ್ಲಿ ಹವಾನಿಯಂತ್ರಿತ ಮಳಿಗೆ ಒಳಗೊಂಡ ಕಟ್ಟಡವನ್ನು ನಿರ್ಮಿಸಲಾಗಿರುತ್ತದೆ.

86. ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಪಿ.ಎಫ್ ಲೇಔಟ್‌ನ ಸ್ಥಳೀಯ ನಿವಾಸಿಗಳ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ರೂ.3.00 ಕೋಟಿಗಳ ಅನುದಾನಲ್ಲಿ ಬಹು ಉದ್ದೇಶಿತ ಕಟ್ಟಡದ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗಿರುತ್ತದೆ. ಈ ಕಟ್ಟಡವು ಪ್ರಮುಖ ವೈಶಿಷ್ಟ್ಯವೆಂದರೆ, ಸಾರ್ವಜನಿಕ ಕಾರ್ಯಕ್ರಮಗಳಿಗಾಗಿ ಮೊದಲ ಮಹಡಿಯಲ್ಲಿ ಕಾರ್ಯಕ್ರಮ ಸಭಾಂಗಣ (ಫಂಕ್ಷನ್ ಹಾಲ್), ನೆಲಮಹಡಿಯಲ್ಲಿ ಊಟದ ಪ್ರದೇಶವನ್ನು ಹಾಗೂ ಮೇಲ್ಛಾವಣಿಯಲ್ಲಿ ಸ್ಥಳಿಯ ಮಕ್ಕಳಿಗಾಗಿ ಆಟದ ಪ್ರದೇಶವನ್ನು ನಿರ್ಮಾಣ ಮಾಡಲಾಗುತ್ತಿದ್ದು ಇದರಿಂದ ಸಾರ್ವಜನಿಕರಿಗೆ ಅನುಕೂಲಕರವಾಗುವುದಲ್ಲದೆ ಪಾಲಿಕೆಗೂ ಆದಾಯವನ್ನು ನಿರೀಕ್ಷಿಸಲಾಗಿದೆ.

87. ಬಸವನಗುಡಿ ವಿಧಾನಸಭಾ ಕ್ಷೇತ್ರದಲ್ಲಿ ಕರ್ನಾಟಕ ಸರ್ಕಾರದ ಅನುದಾನದಡಿಯಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತಹ ವಿವಿಧೋದ್ದೇಶ ಕಾಮಗಾರಿಗಳನ್ನು ಚೆನ್ನಮ್ಮನ ಕೆರೆ ಅಚ್ಚುಕಟ್ಟು ಆಟದ ಮೈದಾನಕ್ಕೆ ಹೊಂದಿಕೊಂಡಂತಿರುವಂತೆ ಕ್ರೀಡಾ ಕಟ್ಟಡವನ್ನು ಒಟ್ಟು ರೂ.11.30 ಕೋಟಿಗಳ ವೆಚ್ಚದಲ್ಲಿ ಎರಡು ಹಂತಗಳಲ್ಲಿ ಪೂರ್ಣಗೊಳಿಸಲಾಗಿರುತ್ತದೆ, ಅದರಲ್ಲಿ ಮೊದಲನೆಯದಾಗಿ ರೂ.7.30 ಕೋಟಿಗಳ ವೆಚ್ಚದಲ್ಲಿ 222.75 ಮೀಟರ್ ಉದ್ದದ ಸ್ಕೇಟಿಂಗ್ ಟ್ರ್ಯಾಕ್ ಮತ್ತು ಶೂಟಿಂಗ್ ತರಬೇತಿ ಕೇಂದ್ರವನ್ನು ನಿರ್ಮಿಸಲಾಗಿರುತ್ತದೆ ಹಾಗೂ ಎರಡನೇ ಹಂತದಲ್ಲಿ ರೂ.4.00 ಕೋಟಿಗಳ ವೆಚ್ಚದಲ್ಲಿ ಬ್ಯಾಡ್ಮಿಂಟನ್ ಕೋರ್ಟ್ ಮತ್ತು ಟೇಬಲ್ ಟೆನಿಸ್ ಕೋರ್ಟ್ ಗಳನ್ನು ನಿರ್ಮಿಸಲಾಗಿರುತ್ತದೆ.

88. ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಯಡಿಯೂರು ವಿಭಾಗ ವ್ಯಾಪ್ತಿಯಲ್ಲಿ 2025–26ನೇ ಸಾಲಿನ ಬಿ.ಬಿ.ಎಂ.ಪಿ, ನವ ನಗರೋತ್ಥಾನ ಹಾಗೂ ಅಮೃತ ನಗರೋತ್ಥಾನ ಅನುದಾನದಡಿಯಲ್ಲಿ ಸಾರ್ವಜನಿಕರಿಗೆ ಹಾಗೂ ಬಡ ವರ್ಗದ ಜನರಿಗೆ ಅನುಕೂಲವಾಗುವಂತೆ ವಿವಿಧೋದ್ದೇಶ ಕಾಮಗಾರಿಗಳನ್ನು ಅಂದಾಜಿಸಿ, ಪೂರ್ಣಗೊಳಿಸಲಾಗಿರುತ್ತದೆ. ಅದರಲ್ಲಿ ಮೊದಲನೆಯದಾಗಿ ವಾರ್ಡ್ ಸಂಖ್ಯೆ–167, ಯಡಿಯೂರು ವ್ಯಾಪ್ತಿಯಲ್ಲಿ ಯಡಿಯೂರು ಕೆರೆಯ ಎದುರು ಪಾಲಿಕೆಯ ವತಿಯಿಂದ "ಅ.ನ.ಕೃ. (ಅರಕಲಗೂಡು ನರಸಿಂಗರಾಯ ಕೃಷ್ಣರಾವ್) ಸಮುದಾಯ ಭವನ" ವನ್ನು ರೂ.26.50 ಕೋಟಿಗಳಲ್ಲಿ ನಿರ್ಮಾಣ ಮಾಡಿ, ಬಡ ವರ್ಗದ ಜನರಿಗೆ ಮದುವೆ, ಆರತಕ್ಷತೆ, ನಿಶ್ಚಿತಾರ್ಥ ಮತ್ತು ನಾಮಕರಣ ಹಾಗೂ ಇನ್ನಿತರೆ ಶುಭಕಾರ್ಯಗಳನ್ನು ನಡೆಸಲು ಆರ್ಥಿಕ ಹೊರೆಯಾಗದಂತೆ ನಾಗರೀಕರ ಅನುಕೂಲಕ್ಕೆಂದು ನಿರ್ಮಿಸಲಾಗಿರುತ್ತದೆ ಮತ್ತು ವಾರ್ಡ್ ಸಂಖ್ಯೆ 166–ಕರೀಸಂದ್ರ ವ್ಯಾಪ್ತಿಯಲ್ಲಿ ಸಾರ್ವಜನಿಕರ ಹಾಗೂ ಬಡ ವರ್ಗದವರಿಗೆ ಆರ್ಥಿಕ

ಹೊರೆಯಾಗದೇ ಅನುಕೂಲವಾಗುವಂತೆ ರೂ.12.00 ಕೋಟಿಗಳಲ್ಲಿ "ಹೆರಿಗೆ ಆಸ್ಪತ್ರೆ"ಯನ್ನು ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ನೀಡುವ ಉದ್ದೇಶದಿಂದ ನಿರ್ಮಿಸಲಾಗಿರುತ್ತದೆ.

89. ಕರ್ನಾಟಕ ಸರ್ಕಾರದ 2026–27ರ ಆಯವ್ಯಯ ಭಾಷಣದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದಡಿಯ ಐದು ಮಹಾನಗರ ಪಾಲಿಕೆಗಳು ತಮ್ಮ Balance Sheet ಆಧಾರದಲ್ಲಿ ''ಮುನ್ಸಿಪಲ್ ಬಾಂಡ್''ಗಳನ್ನು ಹೊರಡಿಸುವ ಮೂಲಕ, ಅಭಿವೃದ್ಧಿ ಕಾಮಗಾರಿಗಳಿಗೆ ಸಂಪನ್ಮೂಲವನ್ನು ಕ್ರೋಢೀಕರಿಸಲಾಗುವುದು ಎಂದು ಘೋಷಿಸಲಾಗಿದೆ. ಅದರಂತೆ ಪಶ್ಚಿಮ ನಗರ ಪಾಲಿಕೆಯಲ್ಲಿ ರೂ.200.00 ಕೋಟಿಗಳ 'ಮುನ್ಸಿಪಲ್ ಬಾಂಡ್'ಗಳನ್ನು ಹೊರಡಿಸಲಾಗುವುದು ಹಾಗೂ ಕೇಂದ್ರ ಸರ್ಕಾರವು ಪ್ರತೀ ರೂ.100.00 ಕೋಟಿಗಳ ಮುನ್ಸಿಪಲ್ ಬಾಂಡ್‌ಗಳಿಗೆ ರೂ.13.00 ಕೋಟಿಗಳ ಪ್ರೋತ್ಸಾಹಧನವನ್ನು ನೀಡುತ್ತಿದ್ದು, ಅದರಂತೆ ಪಾಲಿಕೆಗೆ ರೂ.26.00 ಕೋಟಿಗಳ ಪ್ರೋತ್ಸಾಹಧನವನ್ನು ನಿರೀಕ್ಷಿಸಲಾಗಿದೆ, ಪಾಲಿಕೆಗೆ ಮುನ್ಸಿಪಲ್ ಬಾಂಡ್ ಗಳಿಂದ ಲಭಿಸುವ ಒಟ್ಟಾರೆ ರೂ.226.00 ಕೋಟಿಗಳನ್ನು ಬಂಡವಾಳ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗುವುದು.

90. ಪಾಲಿಕೆಯ ವ್ಯಾಪ್ತಿಯ ರಾಜರಾಜೇಶ್ವರಿ ನಗರ ವಲಯ, ದಾಸರಹಳ್ಳಿ ವಲಯ ಮತ್ತು ಕೋರಮಂಗಲ ವ್ಯಾಲಿ ಪ್ರಾಜೆಕ್ಟ್ ಅಡಿಯಲ್ಲಿ ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ಕೆಲವು ಭಾಗಗಳನ್ನು ಒಳಗೊಂಡಂತೆ "ಕರ್ನಾಟಕ ಜಲ ಭದ್ರತೆ ಮತ್ತು ಸ್ಥಿತಿಸ್ಥಾಪಕತ್ವ" ಕಾರ್ಯಕ್ರಮದ (KWSRP) ಅಡಿಯಲ್ಲಿ ಬಾಹ್ಯ ನೆರವಿನ ಅನುದಾನಿತ ಯೋಜನೆಯೊಂದಿಗೆ (ವಿಶ್ವಬ್ಯಾಂಕ್/world bank) RCC ತಡೆ ಗೋಡೆಗಳು, ನೀರು ಸಂಗ್ರಹಣಾ ರಚನೆಗಳು, ಪ್ರಕೃತಿ ಆಧಾರಿತ ಪರಿಹಾರ ರಚನೆಗಳು / ಸೇತುವೆಗಳು ಮತ್ತು ಕಲ್ವರ್ಟ್‌ಗಳನ್ನು ಒಳಗೊಂಡಂತೆ ಬೃಹತ್ ಮಳೆ ನೀರುಗಾಲುವೆ

(SWD) ಗೆ ಪ್ರವಾಹ ನಿಯಂತ್ರಣ ರಚನೆಗಳ ನಿರ್ಮಾಣವನ್ನು ಅನುಷ್ಠಾನಗೊಳಿಸಲಾಗುವುದು.

91. ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಯೋಜನೆ (CSSIP)ಯಡಿ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ಪ್ರಮುಖ ರಸ್ತೆಗಳು ಹಾಗೂ ಇತರೆ ಮೂಲಭೂತ ಸೌಕರ್ಯಕ್ಕೆ ಒಟ್ಟು ರೂ.667.74 ಕೋಟಿಗಳ ಅನುದಾನದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

92. ನಗರದಲ್ಲಿ ಹೆಚ್ಚುತ್ತಿರುವ ಟ್ರಾಫಿಕ್ ಸಮಸ್ಯೆಯನ್ನು ನಿವಾರಿಸಲು ಮಹತ್ವದ ಕ್ರಮ ಕೈಗೊಳ್ಳಲಾಗಿದ್ದು ಮುಖ್ಯ ಹಾಗೂ ಉಪಮುಖ್ಯ ರಸ್ತೆಗಳ ಅಗಲೀಕರಣಕ್ಕಾಗಿ ರೂ.8.00 ಕೋಟಿಗಳನ್ನು ಮೀಸಲಿರಿಸಲಾಗಿದೆ. ಈ ಯೋಜನೆಯ ಮೂಲಕ ಸಂಚಾರ ದಟ್ಟಣೆ ಕಡಿಮೆಯಾಗುವ ನಿರೀಕ್ಷೆಯಿದ್ದು, ಸಾರ್ವಜನಿಕರಿಗೆ ಸುಗಮ ಸಂಚಾರ ಸೌಲಭ್ಯ ಒದಗಿಸುವುದು ಮುಖ್ಯ ಉದ್ದೇಶವಾಗಿದೆ.

93. ಮಾನ್ಯ ಮುಖ್ಯಮಂತ್ರಿಗಳ ಮೂಲಭೂತ ಸೌಕರ್ಯಕ್ಕೆ ಅಭಿವೃದ್ಧಿ ಯೋಜನೆ (CMIDP) ಯಡಿ ಒಟ್ಟಾರೆ 174.49 ಕಿ.ಮೀ. ಗಳ ವಾರ್ಡ್ ರಸ್ತೆಗಳನ್ನು ಒಟ್ಟಾರೆ ರೂ.317.25 ಕೋಟಿಗಳ ಅನುದಾನದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

94. ಕರ್ನಾಟಕ ಸರ್ಕಾರದ ಆಯವ್ಯಯ ಘೋಷಣೆ ಕಂಡಿಕೆ ಸಂಖ್ಯೆ 297 ರಲ್ಲಿ ಬೆಂಗಳೂರು ನಗರ ಪಾಲಿಕೆಗಳ ಸ್ವಂತ ಸಂಪನ್ಮೂಲದಲ್ಲಿ ಮುಂದಿನ ಮೂರು ವರ್ಷಗಳಲ್ಲಿ 175 ಜಂಕ್ಷನ್‌ಗಳ ಸೌಂದರ್ಯೀಕರಣ, 500 ಕಿ.ಮೀ ಉದ್ದದ ಪಾದಾಚಾರಿ ಮಾರ್ಗಗಳನ್ನು ಮೇಲ್ದರ್ಜೆಗೇರಿಸಲು ಮತ್ತು 100 sky walk ಗಳ ನಿರ್ಮಾಣ ಮಾಡಲು ಘೋಷಿಸಿದ್ದು, ಅದರಂತೆ ಪಾಲಿಕೆಯ ಆಯವ್ಯದಲ್ಲಿ ಸದರಿ ಉದ್ದೇಶಕ್ಕಾಗಿ ಪ್ರಸ್ತುತ ಸಾಲಿನಲ್ಲಿ ರೂ.50.00 ಕೋಟಿಗಳ ಅನುದಾನವನ್ನು ಮೀಸಲಿರಿಸಿದೆ.

95. ನಗರದ ಸಮತೋಲನಯುತ ಮತ್ತು ಶಾಶ್ವತ ಅಭಿವೃದ್ಧಿಯನ್ನು ಸಾಧಿಸುವ ಉದ್ದೇಶದಿಂದ ಪಾಲಿಕೆಯ ಪ್ರತಿ ವಾರ್ಡ್‌ಗೆ ಬಂಡವಾಳ ಕಾಮಗಾರಿಗಳಿಗಾಗಿ ರೂ.1.50 ಕೋಟಿ ಹಾಗೂ ನಿರ್ವಹಣಾ ಕಾಮಗಾರಿಗಳಿಗಾಗಿ ರೂ.75.00 ಲಕ್ಷಗಳಂತೆ ಈ ಸಾಲಿನ ಆಯವ್ಯಯದಲ್ಲಿ ಕ್ರಮವಾಗಿ ರೂ.168.00 ಕೋಟಿ ಹಾಗೂ ರೂ.85.50 ಕೋಟಿಗಳನ್ನು ಮೀಸಲಿಡಲಾಗಿದೆ.

96. ಬೆಂಗಳೂರು ನಗರದ ಪ್ರಮುಖ ಸಂಚಾರ ಕೇಂದ್ರವಾದ ಗೊರಗುಂಟೆಪಾಳ್ಯದಲ್ಲಿ ಟ್ರಾಫಿಕ್ ಸಮಸ್ಯೆ ನಿವಾರಣೆಗೆ ಟ್ರಾನ್ಸಿಟ್ ಓರಿಯೆಂಟೆಡ್ ಡೆವಲಪ್ಮೆಂಟ್ (TOD) ಆಧಾರಿತವಾಗಿ ವಿಶೇಷ ಯೋಜನೆಗಳನ್ನು ಕೈಗೊಳ್ಳಲಾಗುವುದು. ತುಮಕೂರು ರಸ್ತೆಯ ಪ್ರಮುಖ ಜಂಕ್ಷನ್ ಆಗಿರುವ ಈ ಪ್ರದೇಶದಲ್ಲಿ ಭಾರೀ ವಾಹನ ಸಂಚಾರದಿಂದ ದಿನನಿತ್ಯ ಟ್ರಾಫಿಕ್ ದಟ್ಟಣೆ ಉಂಟಾಗುತ್ತಿದೆ. ಇದರ ಪರಿಹಾರವಾಗಿ ಗೊರಗುಂಟೆಪಾಳ್ಯ ಮೆಟ್ರೋ ನಿಲ್ದಾಣದ ಸುತ್ತಮುತ್ತ ಪಾದಚಾರಿಗಳಿಗೆ ಅನುಕೂಲಕರ ಪಾದಾಚಾರಿ ಮಾರ್ಗಗಳು, ಫೀಡರ್ ಬಸ್ ಸೇವೆಗಳು, ಪಾರ್ಕಿಂಗ್ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಹಾಗೂ ವಾಹನ ಸವಾರರ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ರಸ್ತೆ ಅಗಲೀಕರಣ ಉದ್ದೇಶಕ್ಕಾಗಿ ರೂ.2.00 ಕೋಟಿಗಳ ಅನುದಾನ ಮೀಸಲಿರಿಸಿದೆ.

97. ಪೀಣ್ಯ ಕೈಗಾರಿಕಾ ಪ್ರದೇಶ ವಿಭಾಗ ವತಿಯಿಂದ 2026–27ನೇ ಸಾಲಿನ ಆಯವ್ಯಯದಲ್ಲಿ ಪೀಣ್ಯ ಕೈಗಾರಿಕಾ ಪ್ರದೇಶ ವಿಭಾಗ ವ್ಯಾಪ್ತಿಗೆ ಒಳಪಡುವ ವಾರ್ಡ್ ನಂ.39–ಚೊಕ್ಕಸಂದ್ರದ ವಿದ್ಯಾನಗರದಲ್ಲಿರುವ ಬೃಹತ್ ನೀರುಗಾಲುವೆಗೆ ಅಡ್ಡಲಾಗಿ ಕಟ್ಟಿರುವ ಸೇತುವೆಯು ಬಹಳ ಹಳೆಯದಾಗಿದ್ದು, ಶಿಥಿಲಗೊಂಡಿರುತ್ತದೆ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಯೋಗ್ಯವಿರುವುದಿಲ್ಲ. ಆದುದರಿಂದ ಸದರಿ ಸೇತುವೆಯನ್ನು ತೆರವುಗೊಳಿಸಿ ಹೊಸದಾಗಿ ಸೇತುವೆ ನಿರ್ಮಾಣ ಮಾಡುವ

ಸಲುವಾಗಿ ಪ್ರಸ್ತುತ ಸಾಲಿನಲ್ಲಿ ರೂ.1.00 ಕೋಟಿ ಅನುದಾನವನ್ನು ಮೀಸಲಿರಿಸಿದೆ.

98. ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಪ್ರತಿ ವಿಧಾನಸಭಾ ವ್ಯಾಪ್ತಿಯ ಮಾರುಕಟ್ಟೆ/ವಾಣಿಜ್ಯ ಪ್ರದೇಶದ ರಸ್ತೆಗಳಲ್ಲಿ ಶಿಸ್ತುಬದ್ಧ ಪಾರ್ಕಿಂಗ್ ವ್ಯವಸ್ಥೆ ಮಾಡಲು, ರಸ್ತೆಯ ಮೇಲೆ ಅಕ್ರಮ ಪಾರ್ಕಿಂಗ್ ಕಡಿಮೆ ಮಾಡಲು, ಸಂಚಾರ ಸುಗಮಗೊಳಿಸಲು (On Street Parking) ಟೆಂಡರ್ ಪಾರ್ಕಿಂಗ್ ಕರೆಯಲಾಗಿದ್ದು, Pay and Park ಶುಲ್ಕದಿಂದ ಪಾಲಿಕೆಗೆ ಹೆಚ್ಚುವರಿ ಆದಾಯ ನಿರೀಕ್ಷಿಸಲಾಗಿದೆ.

99. ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವ ಸಲುವಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ ಒಟ್ಟು 10 ಟೋಯಿಂಗ್ ವಾಹನವನ್ನು ಗುತ್ತಿಗೆ ಆಧಾರದ ಮೇಲೆ ಪಡೆದು ಸಂಚಾರಿ ಪೋಲಿಸರ ಮೂಲಕ ವಾಹನ ನಿಲುಗಡೆ ಹಾಗೂ ನಿಷೇಧಿತ ಪ್ರದೇಶದಲ್ಲಿ ನಿಂತಿರುವ ವಾಹನಗಳ ಟೋಯಿಂಗ್ ಮಾಡಲು ಕ್ರಮ ಕೈಗೊಳ್ಳಲಾಗುವುದು. ಇದರಿಂದ ಸಂಚಾರ ದಟ್ಟಣೆ ಕಡಿಮೆ ಮಾಡುವುದು ಹಾಗೂ ತ್ಯಜಿಸಿದ (Abandoned) ವಾಹನಗಳನ್ನು ಟೋಯಿಂಗ್ ಮಾಡಿ ನಿಗಧಿತ ಪ್ರದೇಶಕ್ಕೆ ಸಾಗಿಸುವುದರಿಂದ, ಪಾದಾಚಾರಿಗಳ ಸಂಚಾರಕ್ಕೆ ಅನುಕೂಲವಾಗುತ್ತದೆ.

100. ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕರು ರಸ್ತೆ ಬದಿಯಲ್ಲಿ ತಮ್ಮ ವಾಹನಗಳನ್ನು ನಿಲ್ಲಿಸುವುದರಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿರುವುದರಿಂದ ಸೂಕ್ತ ಜಾಗವನ್ನು ಗುರುತಿಸಿ Multi Level Car Parking ವ್ಯವಸ್ಥೆಯನ್ನು ಕಲ್ಪಿಸಲು ಯೋಜನೆ ರೂಪಿಸಲಾಗುವುದು.

101. ವಿಜಯನಗರ ವಿಧಾನಸಭಾ ಕ್ಷೇತ್ರದ ಹಂಪಿನಗರ ವಾರ್ಡ್-133ರ ವ್ಯಾಪ್ತಿಯಲ್ಲಿ ಕೆಂಪೇಗೌಡ ಭವನ ನಿರ್ಮಾಣ ಮಾಡುವ ಸಲುವಾಗಿ

ಪ್ರಸ್ತುತ ಆರ್ಥಿಕ ವರ್ಷದಲ್ಲಿ ರೂ.25.00 ಕೋಟಿಗಳ ಅನುದಾನವನ್ನು ಮೀಸಲಿರಿಸಿದೆ.

102. ಪಶ್ಚಿಮ ನಗರ ಪಾಲಿಕೆಯ ಎಲ್ಲಾ ರಸ್ತೆಗಳಲ್ಲಿ, ನಾಮಫಲಕಗಳಲ್ಲಿ (QR Code) ಅನ್ನು ಅಳವಡಿಸಿ, ನಾಗರೀಕ ಸೇವೆಗಳನ್ನು ಮತ್ತು ದೈನಂದಿನ ಸೇವೆಗಳ ಉಪಯುಕ್ತತೆಗಳಿಗೆ ಸಂಬಂಧಿಸಿದ ಅಧಿಕಾರಿಗಳ/ನೌಕರರ/ಸಿಬ್ಬಂದಿಗಳ ಮಾಹಿತಿಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

103. ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಗೆ ಐದು (05) ಮಾನವ ಸಂಬಂಧಿತ ಹಾಗೂ ಒಂದು (01) ಪ್ರಾಣಿ ಸಂಬಂಧಿತ ಚಿತಾಗಾರಗಳಲ್ಲಿ ರೂಫ್ ಟಾಪ್ (Roof top) ಸೋಲಾರ್ ಅಳವಡಿಸಿ ವಿದ್ಯುತ್ ಉಳಿತಾಯ ಮಾಡಲು ಯೋಜನೆ ರೂಪಿಸಲಾಗಿದೆ, ಹಾಗೆಯೇ ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಎಲ್ಲಾ ಪಾಲಿಕೆ ಕಟ್ಟಡಗಳಲ್ಲಿ ಸೋಲಾರ್ ಯೋಜನೆಯನ್ನು ಹಂತ ಹಂತವಾಗಿ ಅಳವಡಿಸಿ ವಿದ್ಯುತ್ ಉಳಿತಾಯಕ್ಕೆ ಕ್ರಮ ಕೈಗೊಳ್ಳಲು ಆಯವ್ಯಯದಲ್ಲಿ ರೂ.2.00 ಕೋಟಿಗಳ ಅನುದಾನವನ್ನು ಮೀಸಲಿರಿಸಿದೆ.

104. ಎಲ್.ಇ.ಡಿ ಬೀದಿ ದೀಪಗಳ ಅಳವಡಿಕೆ ಮೂಲಕ "ಹಸಿರು ಭವಿಷ್ಯಕ್ಕೆ ಅಡಿಪಾಯ-ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ವ್ಯಾಪ್ತಿಯ 1,12,119 ರಷ್ಟು ಸೋಡಿಯಂ ಬೀದಿ ದೀಪಗಳನ್ನು ಎಲ್.ಇ.ಡಿ ಬೀದಿ ದೀಪಗಳಾಗಿ ಬದಲಾಯಿಸುವ ಯೋಜನೆಯು ಪ್ರಗತಿಯಲ್ಲಿದ್ದು, ಇದರಿಂದ ಸುಮಾರು 65.95% ರಷ್ಟು ವಿದ್ಯುತ್ ಉಳಿತಾಯ ಮಾಡಲಾಗುತ್ತದೆ ಹಾಗೂ ಬೆಂಗಳೂರಿನ ಹಸಿರು ಪರಿಸರ ಸ್ನೇಹಿ ವಾತಾವರಣಕ್ಕೆ ಒತ್ತು ನೀಡಲಾಗುತ್ತಿದೆ.

105. ಯಶವಂತಪುರ ವಿಧಾನ ಸಭಾ ಕ್ಷೇತ್ರದ ಕುಂಬಳಗೂಡು ವಿದ್ಯುತ್ ಚಿತಾಗಾರದ ಅಭಿವೃದ್ಧಿಗಾಗಿ ಪ್ರಸ್ತುತ ಆಯವ್ಯಯದಲ್ಲಿ ಹೆಚ್ಚುವರಿಯಾಗಿ ರೂ.10.00 ಕೋಟಿಗಳ ಅನುದಾನನ್ನು ಮೀಸಲಿರಿಸಿದೆ.

106.ಸಾಂಸ್ಕೃತಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಹಾಗೂ ಸಾರ್ವಜನಿಕರಿಗೆ ಉತ್ತಮ ಸೌಕರ್ಯಗಳನ್ನು ಒದಗಿಸುವ ಉದ್ದೇಶದಿಂದ ಡಾ.ರಾಜ್‌ಕುಮಾರ್ ಸಭಾಂಗಣದ ಪುನರುಜ್ಜೀವನ ಕಾರ್ಯಗಳನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವ (PPP) ಮಾದರಿಯಲ್ಲಿ ಕೈಗೆತ್ತಿಕೊಳ್ಳಲಾಗುತ್ತದೆ. ಹಾಗೂ ಪಾಲಿಕೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಲಭ್ಯವಿರುವ ಸಭಾಂಗಣಗಳ ಮೂಲಸೌಕರ್ಯವನ್ನು ನವೀಕರಿಸಿ, ಆಧುನಿಕ ಧ್ವನಿ–ಬೆಳಕು ವ್ಯವಸ್ಥೆ, ಆಸನ ವ್ಯವಸ್ಥೆ ಹಾಗೂ ಅಗತ್ಯ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಮೂಲಕ ಕಲಾ, ಸಾಹಿತ್ಯ ಮತ್ತು ಸಾಮಾಜಿಕ ಕಾರ್ಯಕ್ರಮಗಳಿಗೆ ಸಮರ್ಪಕವಾದ ಕೇಂದ್ರವಾಗಿ ರೂಪುಗೊಳಿಸಲಾಗುವುದು. ಈ ಮೂಲಕ ಸ್ಥಳೀಯ ಪ್ರತಿಭೆಗಳಿಗೆ ವೇದಿಕೆ ಒದಗಿಸುವುದರ ಜೊತೆಗೆ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಗೂ ಆದ್ಯತೆ ನೀಡಲಾಗುತ್ತದೆ ಹಾಗೂ ಇದರಿಂದ ಪಾಲಿಕೆಗೆ ಆದಾಯವನ್ನು ನಿರೀಕ್ಷಿಸಲಾಗಿದೆ.

107.ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಪ್ರಸ್ತುತ ಸಾಲಿನ ಆಯವ್ಯದಲ್ಲಿ ರೂ.5.00 ಕೋಟಿಗಳ ಅನುದಾನ ಮೀಸಲಿರಿಸಿದೆ.

108.ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಪ್ರಸ್ತುತ ಸಾಲಿನ ಆಯವ್ಯದಲ್ಲಿ ರೂ.5.00 ಕೋಟಿಗಳ ಅನುದಾನ ಮೀಸಲಿರಿಸಿದೆ.

109.ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಪ್ರಸ್ತುತ ಸಾಲಿನ ಆಯವ್ಯದಲ್ಲಿ ರೂ.4.00 ಕೋಟಿಗಳ ಅನುದಾನ ಮೀಸಲಿರಿಸಿದೆ.

110. ಯುವಜನತೆ ಮತ್ತು ಸಾರ್ವಜನಿಕರಲ್ಲಿ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಉತ್ತೇಜಿಸುವ ಉದ್ದೇಶದಿಂದ ನಾಗರಭಾವಿಯಲ್ಲಿರುವ ಜ್ಞಾನಸೌಧ ಕ್ರೀಡಾ ಚಟುವಟಿಕೆ ಕೇಂದ್ರ ಮತ್ತು ಸಭಾಂಗಣದಲ್ಲಿ ಪೈಲಟ್ ಯೋಜನೆಯನ್ನು

ಪ್ರಾರಂಭಿಸಲಾಗುತ್ತದೆ. ಈ ಯೋಜನೆಯಡಿ ವಿವಿಧ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಆಯೋಜಿಸಲು ಈವೆಂಟ್ ಮ್ಯಾನೇಜರ್ ಹಾಗೂ ಕ್ರೀಡಾ ತರಬೇತಿಯನ್ನು ಪರಿಣಾಮಕಾರಿಯಾಗಿ ನೀಡಲು ತರಬೇತಿ ಪಡೆದ ವೃತ್ತಿಪರರನ್ನು ನಿಯೋಜಿಸಲಾಗುತ್ತದೆ. ಕ್ರೀಡಾ ಸೌಲಭ್ಯಗಳ ಸುಧಾರಣೆ, ತರಬೇತಿ ಶಿಬಿರಗಳ ಆಯೋಜನೆ ಮತ್ತು ಸಭಾಂಗಣದಲ್ಲಿ ಸಾಂಸ್ಕೃತಿಕ–ಸಾಮಾಜಿಕ ಕಾರ್ಯಕ್ರಮಗಳ ನಿರ್ವಹಣೆಗೆ ಆಧುನಿಕ ವ್ಯವಸ್ಥೆಗಳನ್ನು ಜಾರಿಗೆ ತರಲಾಗುತ್ತದೆ. ಸೌಲಭ್ಯಗಳ ಪರಿಣಾಮಕಾರಿ ಬಳಕೆ, ಆದಾಯ ಸೃಷ್ಟಿ ಮತ್ತು ಸಾರ್ವಜನಿಕರಿಗೆ ಗುಣಮಟ್ಟದ ಸೇವೆಗಳನ್ನು ಒದಗಿಸುವತ್ತ ವಿಶೇಷ ಗಮನ ಹರಿಸಲಾಗುತ್ತದೆ. ಪೈಲಟ್ ಯೋಜನೆಯ ಅನುಭವದ ಆಧಾರದ ಮೇಲೆ ಭವಿಷ್ಯದಲ್ಲಿ ಇಂತಹ ಕ್ರಮಗಳನ್ನು ಇತರೆ ಕೇಂದ್ರಗಳಿಗೂ ವಿಸ್ತರಿಸುವುದು ಉದ್ದೇಶವಾಗಿದೆ.

111. ಕೆಂಗೇರಿ ಉಪನಗರದಲ್ಲಿ ಗಣೇಶ ಸಾರ್ವಜನಿಕ ಆಟದ ಮೈದಾನ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗಿದ್ದು. ಗ್ರೀನ್ ಗ್ರಾಸ್ ಅಳವಡಿಕೆ, ವಿದ್ಯುತ್ ಬೆಳಕಿನ ವ್ಯವಸ್ಥೆ, ಕುಳಿತುಕೊಳ್ಳಲು ಆಸನಗಳ ಸೌಲಭ್ಯ ಹಾಗೂ ಅಗತ್ಯ ಕ್ರೀಡಾ ಸಾಮಾಗ್ರಿಗಳನ್ನು ಒದಗಿಸುವ ಮೂಲಕ ಆಟದ ಮೈದಾನವನ್ನು ಉನ್ನತ ದರ್ಜೆಗೇರಿಸಿ, ಈ ಮೈದಾನವನ್ನು ಕ್ರೀಡಾ ಕಾರ್ಯಕ್ರಮಗಳು, ತರಬೇತಿ ಶಿಬಿರಗಳು ಮತ್ತು ಸಾರ್ವಜನಿಕ ಉಪಯೋಗಕ್ಕಾಗಿ ಬಾಡಿಗೆ ಆಧಾರದಲ್ಲಿ ನೀಡುವ ಮೂಲಕ ಪಾಲಿಕೆಗೆ ಹೆಚ್ಚುವರಿ ಆದಾಯವನ್ನು ಗಳಿಸುವುದರ ಜೊತೆಗೆ, ಯುವಕರಲ್ಲಿ ಕ್ರೀಡಾ ಚಟುವಟಿಕೆಗಳನ್ನು ಉತ್ತೇಜಿಸಲು ಯೋಜನೆ ರೂಪಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ರೂ.5.00 ಕೋಟಿಗಳ ಅನುದಾನವನ್ನು ಆಯವ್ಯಯದಲ್ಲಿ ಮೀಸಲಿರಿಸಿದೆ.

112. ರಾಜಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ನಡದ ಅಪ್ರತಿಮ

ನಟರಾದ ಡಾ.ರಾಜ್‌ಕುಮಾರ್ ಅವರ ಸ್ಮರಣಾರ್ಥವಾಗಿ ಸ್ಥಾಪಿತವಾದ ಡಾ.ರಾಜ್‌ಕುಮಾರ್ ಕಲಾಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಹಾಗೂ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಪ್ರಸ್ತುತ ಸಾಲಿನ ಆಯವ್ಯದಲ್ಲಿ ರೂ.5.00 ಕೋಟಿಗಳ ಅನುದಾನ ಮೀಸಲಿರಿಸಿದೆ.

113. ಬಸವನಗುಡಿ ವಿಧಾನಸಬಾ ಕ್ಷೇತ್ರದ ಹನುಮಂತನಗರ ವಾರ್ಡ್-102ರ ವ್ಯಾಪ್ತಿಯಲ್ಲಿನ ಕುಮಾರಸ್ವಾಮಿ ಉದ್ಯಾನವನದಲ್ಲಿ ರಾಜ್ಯ ಸರ್ಕಾರದ 2022-23ನೇ ಸಾಲಿನ ಅಮೃತ ನಗರೋತ್ಥಾನ ಯೋಜನೆ ಅಡಿಯಲ್ಲಿ ನಿರ್ಮಿಸಲಾದ ವೀಕ್ಷಣೆ ಗೋಪುರದ ಕಾಮಗಾರಿಯು ಅಪೂರ್ಣಗೊಂಡಿದ್ದು, ಸದರಿ ವೀಕ್ಷಣೆ ಗೋಪುರವನ್ನು ಅಗತ್ಯ ಸೌಲಭ್ಯಗಳೊಂದಿಗೆ ಕಾಮಗಾರಿ ಪೂರ್ಣಗೊಳಿಸಲು ಮತ್ತು ಸುತ್ತಲಿನ ಪ್ರದೇಶ ಅಭಿವೃದ್ಧಿಗೊಳಿಸಲು ರೂ.3.00 ಕೋಟಿಗಳನ್ನು ಮೀಸಲಿಡಲಾಗಿರುತ್ತದೆ.

114. ಬಸವನಗುಡಿ ವಿಧಾನಸಭಾ ಕ್ಷೇತ್ರದ ತ್ಯಾಗರಾಜನಗರ ವಾರ್ಡ್-104 ರಲ್ಲಿನ ವಿವಿಧೋದ್ದೇಶ ಕಟ್ಟಡವನ್ನು ರಾಜ್ಯ ಸರ್ಕಾರದ 2022-23ನೇ ಸಾಲಿನ ಅಮೃತ ನಗರೋತ್ಥಾನ ಯೋಜನೆಯಲ್ಲಿ ನಿರ್ಮಿಸಲಾಗಿದ್ದು, ಸದರಿ ಕಟ್ಟಡದಲ್ಲಿ ಶಾಸಕರ ಕಛೇರಿ, ಸಂಸದರ ಕಛೇರಿ ಮತ್ತು ಸಭಾಂಗಣ ನಿರ್ಮಿಸಲು ರೂ.1.00 ಕೋಟಿ ಮೀಸಲಿಡಲಾಗಿರುತ್ತದೆ.

115. ಯಶವಂತಪುರ ವಿಧಾನ ಸಭಾ ಕ್ಷೇತ್ರದಲ್ಲಿ ಸ್ಥಳಿಯ ನಿವಾಸಿಗಳಿಗೆ, ಮಹಿಳಾ ಮತ್ತು ಮಕ್ಕಳ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು 50 ಹಾಸಿಗೆಗಳ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆಯನ್ನು ಒಟ್ಟಾರೆ ರೂ.20.00 ಕೋಟಿಗಳ ಅನುದಾನದಲ್ಲಿ ಕೈಗೊಳ್ಳಲು ಯೋಜನೆ ರೂಪಿಸಿದ್ದು, ಸದರಿ ಆಸ್ಪತ್ರೆ ನಿರ್ಮಾಣಕ್ಕೆ ಈ ಸಾಲಿನ ಆಯವ್ಯದಲ್ಲಿ ರೂ.10.00 ಕೋಟಿಗಳ ಅನುದಾನವನ್ನು ಮೀಸಲಿರಿಸಿದೆ.

## ಬಜೆಟ್‌ನ ಪಕ್ಷಿನೋಟ

ಜನಸಾಮಾನ್ಯರ ಜೀವನಮಟ್ಟವನ್ನು ಸುಧಾರಿಸುವುದು, ಸಮತೋಲನ ಅಭಿವೃದ್ಧಿ ಸಾಧಿಸುವುದು ಹಾಗೂ ಭವಿಷ್ಯದ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು 2026–27ನೇ ಸಾಲಿನ ಆಯವ್ಯಯ ಸಿದ್ಧಪಡಿಸಲಾಗಿದೆ.

2026–27ನೇ ಸಾಲಿನಲ್ಲಿ ಒಟ್ಟು ಜಮೆಗಳು 4732.81 ಕೋಟಿ ರೂ.ಗಳಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಇದರಲ್ಲಿ 2541.73 ಕೋಟಿ ರೂ. ರಾಜಸ್ವ ಜಮೆಗಳು ಹಾಗೂ 200.00 ಕೋಟಿ ರೂ.ಗಳ ಸಾಲ, 731.53 ಕೋಟಿ ರೂ.ಗಳ ಅಸಾಧಾರಣ ಸ್ವೀಕೃತಿಗಳು ಹಾಗೂ 1259.55 ಕೋಟಿ ರೂ.ಗಳ ಬಂಡವಾಳ ಜಮೆಗಳು ಒಳಗೊಂಡಿರುತ್ತವೆ.

1739.50 ಕೋಟಿ ರೂ.ಗಳ ರಾಜಸ್ವ ವೆಚ್ಚ, 2834.67 ಕೋಟಿ ರೂ.ಗಳ ಬಂಡವಾಳ ವೆಚ್ಚ ಹಾಗೂ 158.56 ಕೋಟಿ ರೂ.ಗಳ ಅಸಾಧಾರಣ ವೆಚ್ಚವನ್ನು ಒಳಗೊಂಡು, ಒಟ್ಟು ಆಯವ್ಯಯ 2026–27ರ ವೆಚ್ಚವು 4732.73 ಕೋಟಿ ರೂ.ಗಳಾಗುತ್ತದೆ ಎಂದು ಅಂದಾಜು ಮಾಡಲಾಗಿದೆ.

## ಸಂಪನ್ಮೂಲಗಳ ಕ್ರೋಡೀಕರಣ

2026–27ನೇ ಸಾಲಿನಲ್ಲಿ ಒಟ್ಟು ಸ್ವಂತ ತೆರಿಗೆ ರಾಜಸ್ವವು 1074.80 ಕೋಟಿ ರೂ.ಗಳಾಗಿರುತ್ತದೆ ಎಂದು ಅಂದಾಜು ಮಾಡಲಾಗಿದೆ. ತೆರಿಗೆಯೇತರ ರಾಜಸ್ವಗಳಿಂದ 1305.21 ಕೋಟಿ ರೂ.ಗಳನ್ನು ಹಾಗೂ ಅಸಾಧಾರಣ ಸ್ವೀಕೃತಿ 926.53 ಕೋಟಿ ರೂ.ಗಳನ್ನು ಸಂಗ್ರಹಿಸಬಹುದೆಂದು ನಿರೀಕ್ಷಿಸಲಾಗಿದೆ. ರಾಜ್ಯ ಸರ್ಕಾರದ ರಾಜಸ್ವ ಸ್ವೀಕೃತಿ ಅನುದಾನ 161.73 ಕೋಟಿ ರೂ.ಗಳು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ಬಂಡವಾಳ ಸ್ವೀಕೃತಿ ಅನುದಾನಗಳ ರೂಪದಲ್ಲಿ 1259.55 ಕೋಟಿ ರೂ.ಗಳು ಇರಲಿವೆ.

ಆಚಾರ್ಯ ಚಾಣಕ್ಯರು ಹೇಳಿದಂತೆ: “ಪ್ರಜೆಯ ಸುಖದಲ್ಲೇ ರಾಜನ ಸುಖ ಇದೆ; ಪ್ರಜೆಯ ಹಿತದಲ್ಲೇ ರಾಜನ ಹಿತ ಇದೆ.” ಈ ಆದರ್ಶಗಳನ್ನು ಮನದಲ್ಲಿ ಇಟ್ಟುಕೊಂಡು, ಜನಕಲ್ಯಾಣ ಮತ್ತು ನಗರದ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು, ನಮ್ಮ ಪಾಲಿಕೆಯ ಈ ಪ್ರಥಮ ಬಜೆಟ್‌ನ್ನು ಜಾರಿಗೆ ತರುವ ಸಂಕಲ್ಪ ಮಾಡುತ್ತಾ, ಈ ಆಯವ್ಯಯದ ಪ್ರಸ್ತುತಿಯನ್ನು ಮುಕ್ತಾಯಗೊಳಿಸುತ್ತಿದ್ದೇನೆ.

ಎಲ್ಲರಿಗೂ ತುಂಬು ಹೃದಯದ ಧನ್ಯವಾದಗಳು.

# ಆದಾಯದ ಮೂಲ

| ಕ್ರ.ಸಂ. | ವಿವರಗಳು | ರೂ.ಲಕ್ಷಗಳಲ್ಲಿ | ಶೇಕಡ |
|---|---|---|---|
| 1 | ಆಸ್ತಿ ತೆರಿಗೆ, ಕರಗಳು ಮತ್ತು ತೆರಿಗೆಗೆ ಸಂಬಂಧಿಸಿದ ಆದಾಯ | 107480.00 | 23 |
| 2 | ತೆರಿಗೆಯೇತರ ಆದಾಯ | 130520.59 | 27 |
| 3 | ಭಾರತ ಸರ್ಕಾರದ ಅನುದಾನ | 22456.00 | 5 |
| 4 | ಕರ್ನಾಟಕ ಸರ್ಕಾರದ ರಾಜಸ್ವ ಅನುದಾನ | 16173.00 | 3 |
| 5 | ಕರ್ನಾಟಕ ಸರ್ಕಾರದ ಬಂಡವಾಳ ಅನುದಾನ | 103499.00 | 22 |
| 6 | ಅಸಾಧಾರಣ ಆದಾಯ | 93153.24 | 20 |
| | ಒಟ್ಟು ರೂ. | **473281.83** | **100** |


ಆಸ್ತಿ ತೆರಿಗೆ, ಕರಗಳು  ಮತ್ತು ತೆರಿಗೆಗೆ ಸಂಬಂಧಿಸಿದ ಆದಾಯ
ತೆರಿಗೆಯೇತರ ಆದಾಯ
ಭಾರತ ಸರ್ಕಾರದ ಅನುದಾನ
ಕರ್ನಾಟಕ ಸರ್ಕಾರದ ರಾಜಸ್ವ ಅನುದಾನ
ಕರ್ನಾಟಕ ಸರ್ಕಾರದ ಬಂಡವಾಳ ಅನುದಾನ
ಅಸಾಧಾರಣ ಆದಾಯ
20%
23%
22%
27%
3%
5%

# ವೆಚ್ಚಗಳ ವರ್ಗೀಕರಣ

| ಕ್ರ.ಸಂ. | ವಿವರ | ರೂ.ಲಕ್ಷಗಳಲ್ಲಿ | ಶೇಕಡ |
|---|---|---|---|
| 1 | ಸಿಬ್ಬಂಧಿ ವೆಚ್ಚಗಳು | 48853.60 | 10 |
| 2 | ಆಡಳಿತ ವೆಚ್ಚಗಳು | 15421.10 | 3 |
| 3 | ಘನತ್ಯಾಜ್ಯ ನಿರ್ವಹಣೆ ವೆಚ್ಚಗಳು | 32200.00 | 7 |
| 4 | ಕಾರ್ಯಾಚರಣೆ & ನಿರ್ವಹಣೆ ವೆಚ್ಚಗಳು | 53126.38 | 11 |
| 5 | ಕಾರ್ಯಕ್ರಮಗಳ (ಆರೋಗ್ಯ,ಶಿಕ್ಷಣ ಮತ್ತು ಕಲ್ಯಾಣ) ವೆಚ್ಚಗಳು | 24348.87 | 5 |
| 6 | ಸಾರ್ವಜನಿಕ ಅಭಿವೃದ್ಧಿ ಕಾಮಗಾರಿಗಳು | 283467.80 | 60 |
| 7 | ಠೇವಣಿ ಮತ್ತು ಕರಗಳ ಮರುಪಾವತಿ | 15855.66 | 4 |
| | ಒಟ್ಟು ರೂ. | **473273.41** | **100** |


ಸಿಬ್ಬಂದಿ ವೆಚ್ಚಗಳು
ಆಡಳಿತ ವೆಚ್ಚಗಳು
ಘನತ್ಯಾಜ್ಯ ನಿರ್ವಹಣೆ ವೆಚ್ಚಗಳು
ಕಾರ್ಯಾಚರಣೆ & ನಿರ್ವಹಣೆ ವೆಚ್ಚಗಳು
ಕಾರ್ಯಕ್ರಮಗಳ (ಆರೋಗ್ಯ,ಶಿಕ್ಷಣ ಮತ್ತು ಕಲ್ಯಾಣ) ವೆಚ್ಚಗಳು
ಸಾರ್ವಜನಿಕ ಅಭಿವೃದ್ಧಿ ಕಾಮಗಾರಿಗಳು
ಠೇವಣಿ ಮತ್ತು ಕರಗಳ ಮರುಪಾವತಿ
4%
10%
3%
7%
11%
5%
60%